ಸಂಪುಟ 01 | ಸಂಚಿಕೆ 114 | ಗುರುವಾರ 12 ಮಾರ್ಚ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

01) ಮಾರಿಷಸ್ ದಿನ

ಮಾರಿಷಸ್ ದಿನವನ್ನು ವಾರ್ಷಿಕವಾಗಿ ಮಾರ್ಚ್ 12 ರಂದು ಆಚರಿಸಲಾಗುತ್ತದೆ, ಇದು ದೇಶದ ಇತಿಹಾಸದಲ್ಲಿ ನಡೆದ ಎರಡು ಪ್ರಮುಖ ಘಟನೆಗಳನ್ನು ಗುರುತಿಸುತ್ತದೆ, ಅದು 1968 ರಲ್ಲಿ ಬ್ರಿಟನ್‌ನಿಂದ ಸ್ವಾತಂತ್ರ್ಯ ಪಡೆದ ಮತ್ತು 1992 ರಲ್ಲಿ ಗಣರಾಜ್ಯವಾಯಿತು.

## ಸುಭಾಷಿತ


"ಬದುಕಿನಲ್ಲಿ ಬರುವ ಕಷ್ಟಗಳು ನಿನ್ನನ್ನು ಮುರಿಯಲು ಅಲ್ಲ, ಬದಲಿಗೆ ನಿನ್ನ ಶಕ್ತಿಯನ್ನು ಅರಿಯಲು."

ರವೀಂದ್ರನಾಥ ಟ್ಯಾಗೋರ್

## ಕರಡಕಲ್‌ನಲ್ಲಿ 50 ಬೆಡ್ ಆಸ್ಪತ್ರೆ ಕಟ್ಟಿಸುವಂತೆ: ಜಾಂಬವ ಯುವ ಸೇನೆ ಒತ್ತಾಯ

ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ಪಟ್ಟಣಕ್ಕೆ ಮಂಜೂರಾಗಿರುವ 50 ಬೆಡ್‌ಗಳ ತೀವ್ರ ನಿಗಾ ಘಟಕ ಆಸ್ಪತ್ರೆಯನ್ನು ಕರಡಕಲ್ ಹೊರವಲಯದಲ್ಲಿ ನಿರ್ಮಿಸಬೇಕೆಂದು ಒತ್ತಾಯಿಸಿ ಜಾಂಬವ ಯುವ ಸೇನೆ ತಾಲೂಕ ಅಧ್ಯಕ್ಷ ಶಶಿಕುಮಾರ್ ಸಹಾಯಕ ಆಯುಕ್ತ ಮೂಲಕ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.




ಕರಡಕಲ್ ಹೊರ ವಲಯದ ಸರ್ವೇ ನಂ. 411ರಲ್ಲಿ ಆರು ಎಕರೆ ಜಮೀನು ಆಸ್ಪತ್ರೆ ಕಟ್ಟಡಕ್ಕಾಗಿ ಮಂಜೂರಾಗಿದ್ದು ಅದೇ ಸ್ಥಳದಲ್ಲಿ ನಿಗಾ ಘಟಕ ನಿರ್ಮಾಣ ಮಾಡಬೇಕು. ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ 50ಹಾಸಿಗೆ ಆಸ್ಪತ್ರೆ ಕಟ್ಟಡ ಕಟ್ಟುವ ಹುನ್ನಾರ ನಡೆದಿದೆ ಎಂದು ಆರೋಪಿಸಿದರು. ಕರಡಕಲ್ ಹೊರವಲಯದಲ್ಲಿಯೇ ಆಸ್ಪತ್ರೆ ನಿರ್ಮಿಸಬೇಕು, ತಾಯಿ-ಮಕ್ಕಳ ಆಸ್ಪತ್ರೆಯ ನೂತನ ಕಟ್ಟಡ ಪೂರ್ಣಗೊಂಡು ಐದಾರು ತಿಂಗಳು ಕಳೆದಿದ್ದು ಶೀಘ್ರ ಉದ್ಘಾಟನೆಗೊಳಿಸಿ ಬಡ ರೋಗಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಅಮರೇಶಗೋಸ್ಲೆ ಯಲ್ಲಾಲಿಂಗ ಕುಣಿಕೆಲ್ಲೂರು, ಅಮರೇಶ ಡಿ.ಪವಾರ, ಮಲ್ಲಿಕಾರ್ಜುನ ಸರ್ಜಾಪುರ, ಬಸವರಾಜ ಕುಣಿಕೆಲ್ಲೂರು ಸೇರಿದಂತೆ ಇತರರಿದ್ದರು.

# ಪಾಲಿಕೆ ಸಿಬ್ಬಂದಿಗಳಿಗೆ ಸಿಗದ ಸಂಬಳ
## ಕೆಲಸ-ಕಾರ್ಯ ಬಂದ್ ಮಾಡುವುದಾಗಿ ಎಚ್ಚರಿಕೆ

ಬೆಂಗಳೂರು: ಬಿಬಿಎಂಪಿಯನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರವನ್ನಾಗಿ ರಚಿಸಿದ ನಂತರ ಅಲ್ಲಿನ ಹಣಕಾಸು ಪರಿಸ್ಥಿತಿ ಹದಗೆಟ್ಟಿದೆ ಎಂಬ ಆರೋಪ ಕೇಳಿ ಬರುತ್ತಿರುವ ಸಂದರ್ಭದಲ್ಲಿ ಜಿಬಿಎ ಸಿಬ್ಬಂದಿಗಳಿಗೆ ಸಕಾಲಕ್ಕೆ ವೇತನ ಪಾವತಿಸಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಬೆಂಗಳೂರು ಪಶ್ಚಿಮ ನಗರಪಾಲಿಕೆ ಸಿಬ್ಬಂದಿಗಳಿಗೆ ಫೆಬ್ರವರಿ ತಿಂಗಳ ವೇತನ ಪಾವತಿಯಾಗಿಲ್ಲ. ಹೀಗಾಗಿ ಜಿಬಿಎ ನೌಕರರ ಸಂಘದ ಅಧ್ಯಕ್ಷಅಮೃತ್ ರಾಜ್ ಪಶ್ಚಿಮ ನಗರಪಾಲಿಕೆಯ ಆಯುಕ್ತರಿಗೆ ಪತ್ರ ಬರೆದು ಕೂಡಲೇ ಸಿಬ್ಬಂದಿಗಳಿಗೆ ವೇತನ ಪಾವತಿಸುವಂತೆ ಆಗ್ರಹಿಸಿದ್ದಾರೆ. ಪಶ್ಚಿಮ ವಲಯದ ನಗರಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಹಾಗೂ ನೌಕರ-ರಿಗೆ ಮಾರ್ಚ್ 11 ರೊಳಗೂ ಫೆಬ್ರವರಿ ತಿಂಗಳ ವೇತನ ಪಾವತಿಸದ ಕಾರಣ ಹಲವು ಆರ್ಥಿಕ ಸಮಸ್ಯೆಗಳು ಎದುರಾಗುತ್ತಿವೆ ಎಂದು ಸಿಬ್ಬಂದಿ ತಮ್ಮ ಅಳಲನ್ನು




ಸಂಘದ ಪದಾಧಿಕಾರಿಗಳ ಮುಂದೆ ವ್ಯಕ್ತಪಡಿಸಿದ್ದರು. ಮನೆಬಾಡಿಗೆ ಪಾವತಿ, ಮಕ್ಕಳ ಶಾಲಾ ಶುಲ್ಕ ಹಾಗೂ ದಿನನಿತ್ಯದ ಅಗತ್ಯ ವಸ್ತುಗಳನ್ನು ಖರೀದಿಸುವುದಕ್ಕೂ ಕಷ್ಟವಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.ಈ ಹಿನ್ನೆಲೆಯಲ್ಲಿ 24 ಗಂಟೆಗಳೊಳಗೆ ಫೆಬ್ರವರಿ ತಿಂಗಳ ವೇತನವನ್ನು ಪಾವತಿಸುವಂತೆ ಸಂಘವು ಆಯುಕ್ತರಿಗೆ ಮನವಿ ಮಾಡಿದೆ.

ಇಂದು ಸಂಜೆ ಒಳಗೆ ವೇತನ ಪಾವತಿ ಮಾಡದಿದ್ದರೆ ಪಶ್ಚಿಮ ವಲಯದ ಎಲ್ಲಾ ಕೆಲಸ ಕಾರ್ಯಗಳನ್ನು ಸ್ಥಗಿತಗೊಳಿಸಲಾಗುವುದು ಎಂದು ಪತ್ರದ ಮೂಲಕ ಎಚ್ಚರಿಕೆ ನೀಡಲಾಗಿದೆ. ಇದೀಗ ಪಶ್ಚಿಮ ನಗರಪಾಲಿಕೆಯಲ್ಲಿ ಆದಾಯ ಕಡಿಮೆ ಇರುವುದರಿಂದಲೇ ವೇತನ ಪಾವತಿಯಲ್ಲಿ ಸಮಸ್ಯೆ ಎದುರಾಗುತ್ತಿದೆ ಎಂಬ ಮಾತುಗಳು ಕೇಳಿ ಬರುತ್ತಿವೆ. ಅತಿ ಹೆಚ್ಚು ವಾರ್ಡುಗಳನ್ನು ಹೊಂದಿರುವ ಈ ಪಾಲಿಕೆಯಲ್ಲಿ ಸಿಬ್ಬಂದಿಗಳ ಸಂಖ್ಯೆಯೂ ಹೆಚ್ಚಾಗಿದೆ. ಆದರೆ ಬರುತ್ತಿರುವ ಆದಾಯದಲ್ಲೇ ಸಿಬ್ಬಂದಿಗಳ ವೇತನ ಪಾವತಿ ಮಾಡಬೇಕು ಹಾಗೂ ಅಭಿವೃದ್ಧಿ ಕಾಮಗಾ-ರಿಗಳನ್ನೂ ಕೈಗೊಳ್ಳಬೇಕಾದ ಪರಿಸ್ಥಿತಿ ಎದುರಾಗಿದೆ.

ನಗರಪಾಲಿಕೆ ರಚನೆಯಾಗಿ ಕೇವಲ ಆರು ತಿಂಗಳು ಮಾತ್ರ ಕಳೆದಿರುವ ಈ ಸಂದರ್ಭದಲ್ಲಿ ವೇತನ ಪಾವತಿಗೆ ಆದಾಯ ಕೊರತೆ ಎದುರಾಗಿರುವುದು ಮುಂದಿನ ದಿನಗಳಲ್ಲಿ ಆಡಳಿತ ಹೇಗೆ ಸಾಗಲಿದೆ ಎಂಬ ಪ್ರಶ್ನೆಯನ್ನು ಸಿಬ್ಬಂದಿಗಳಲ್ಲಿ ಮೂಡಿಸಿದೆ.ಇದೇ ವೇಳೆ ಸಮಸ್ಯೆ ಶೀಘ್ರದಲ್ಲೇ ಪರಿಹಾರವಾಗದಿದ್ದರೆ ಪಶ್ಚಿಮ ನಗರಪಾಲಿಕೆಯ ಆಡಳಿತ ಹಾಗೂ ಸೇವೆಗಳ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇದೆ ಎಂಬ ಆತಂಕ ಎದುರಾಗಿದೆ.

## ಜನಗಣತಿ ಕಾರ್ಯ ಜಿಲ್ಲೆಯಲ್ಲಿ ಅಚ್ಚುಕಟ್ಟಾಗಿ ನಡೆಯಲಿ: ಅಪರ ಜಿಲ್ಲಾಧಿಕಾರಿ ಶಿವಾನಂದ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ದೇಶದಲ್ಲಿ ಪ್ರಥಮ ಬಾರಿಗೆ ಸಂಪೂರ್ಣ ಡಿಜಿಟಲ್ ರೀತಿಯಲ್ಲಿ ಜನಗಣತಿ ನಡೆಯಲಿದ್ದು, ಕಾರ್ಯಕ್ಕೆ ನೇಮಿಸಲ್ಪಡುವ ಅಧಿಕಾರಿಗಳು ಮತ್ತು ಸಹಾಯಕ ಅಧಿಕಾರಿಗಳು ಈ ಜನಗಣತಿ ಕರ್ತವ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದು ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಹೇಳಿದರು.**

ಮಾರ್ಚ್ 11ರ ಬುಧವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇ-ರಿಯ ಸಭಾಂಗಣದಲ್ಲಿ ಮನೆ ಪಟ್ಟಿ ಮತ್ತು ವಸತಿ ಗಣಿತ ಕುರಿತು ಕ್ಷೇತ್ರ ಮಟ್ಟದ ತರಬೇತಿಗಾರ-ರಿಗೆ 3 ದಿನಗಳ ತರಬೇತಿ ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಜನಗಣಿತಿಯಲ್ಲಿ ಸ್ವಯಂ ಗಣತಿಯ ಆಯ್ಕೆಯೂ



ಲಭ್ಯವಿದೆ. ಮೊದಲ ಹಂತದಲ್ಲಿ ಏ.16ರಿಂದ 30 ದಿನಗಳ ಕಾಲ ಮನೆ ಪಟ್ಟಿ ಕಾರ್ಯ ನಡೆಯಲಿದೆ. 2ನೇ ಹಂತದಲ್ಲಿ ಜನಸಂಖ್ಯಾ ಎಣಿಕೆ ಕಾರ್ಯ 2027ರ ಫೆಬ್ರವರಿಯಲ್ಲಿ ನಡೆಯಲಿದ್ದು, ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು. ಜಿಲ್ಲೆಯಲ್ಲಿ ಜನಗಣತಿ-2027 ಪ್ರಕ್ರಿಯೆಯ ಪೂರ್ವ ಸಿದ್ಧತೆಗಳು ಆರಂಭಗೊಳ್ಳುತ್ತಿದ್ದು, ಸಂಬಂಧಿಸಿದ ಅಧಿಕಾ-ರಿಗಳು ಈ ಜನಗಣತಿ ಪ್ರಕ್ರಿಯೆಗೆ ಅವಶ್ಯವಿರುವ ಅಗತ್ಯ ನಕ್ಷೆಗಳು, ನಮೂನೆಗಳನ್ನು ತಯಾರು ಮಾಡುವುದು ಸೇರಿದಂತೆ ಎಲ್ಲ ಪೂರ್ವ ತಯಾರಿ ಮಾಡಿಕೊಳ್ಳಬೇಕು. ಜಿಲ್ಲೆಯಲ್ಲಿ ಅಚ್ಚುಕಟ್ಟಾಗಿ ಜನಗಣತಿ ಕರ್ತವ್ಯ ನಿರ್ವಹಿಸಬೇಕು. ನೋಡಲ್ ಅಧಿಕಾರಿಗಳು ಹಿರಿಯ ಅಧಿಕಾರಿಗಳ ಜತೆ ಸಮನ್ವಯ ಸಾಧಿಸಿಕೊಂಡು ಸೂಕ್ತ ಮೇಲ್ವಿಚಾರಣೆ ಮಾಡಬೇಕು ಎಂದು ಸೂಚನೆ ನೀಡಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಉಪಸ್ಥಿತರಿದ್ದ ಮಾಸ್ಟರ್ ಟ್ರೇನರ್ ಸದಾಶಿವಪ್ಪ ಅವರು ಮಾತನಾಡಿ, 2011ರಲ್ಲಿ ಜನಗಣತಿಯು ಹಳೆಯ ಮ್ಯಾನುವೆಲ್ ಪದ್ಧತಿಯಲ್ಲಿ ನಡೆದಿತ್ತು. ಆದರೆ, ಈ ಬಾರಿ ಮೊಬೈಲ್ ಆ?ಯಪ್ ಮೂಲಕ ಡಿಜಿಟಲ್ ಮೋಡ್‌ನಲ್ಲಿ ನಡೆಯಲಿದೆ. ಡಿಜಿಟಲ್ ಮೋಡ್‌ನಲ್ಲಿ ನಡೆಯುವ ಜನಗಣತಿಯು ನಿಖರತೆ ಹಾಗೂ ಪಾರದರ್ಶಕತೆಯಿಂದ ಕೂಡಿರಲಿದೆ. ಇದರಿಂದ ಸರ್ಕಾರಿ ಸೌಲಭ್ಯಗಳನ್ನು ಸಮರ್ಪಕವಾಗಿ ತಲುಪಿಸಲು ಸಾಧ್ಯವಾಗಲಿದೆ ಎಂದು ತಿಳಿಸಿದರು.

2027ರ ಜನಗಣತಿ ಎರಡು ಹಂತಗಳಲ್ಲಿ ನಡೆಯಲಿದ್ದು, ಇದಕ್ಕೆ ಪೂರ್ವಭಾವಿಯಾಗಿ ಮೊದಲ ಹಂತದಲ್ಲಿ ಕರ್ನಾಟಕದಲ್ಲಿ ಮನೆಪಟ್ಟಿ ಕಾರ್ಯಾಚರಣೆ 2026ರ ಏ.16ರಿಂದ ಮೇ.15ರ ವರೆಗೆ ಒಂದು ತಿಂಗಳ ಕಾಲ ನಡೆಯಲಿದೆ. ಈ ಮೂವತ್ತು ದಿನಗಳ ಮನೆಪಟ್ಟಿ ಕಾರ್ಯ ಪ್ರಾರಂಭವಾಗುವ ಹದಿನೈದು ದಿನಗಳ ಮೊದಲು ಸ್ವಯಂ ಗಣತಿಯ ಆಯ್ಕೆ ಲಭ್ಯವಿರುತ್ತದೆ. ಎರಡನೇ ಹಂತದ ಜನಗಣತಿ 2027ರ ಫೆಬ್ರುವರಿಯಿಂದ ಆರಂಭವಾಗಲಿದೆ ಎಂದರು. ಇದೇ ಸಂದರ್ಭದಲ್ಲಿ ಜನಗಣಿತಿಯ ಜಿಲ್ಲಾ ನೋಡಲ್ ಅಧಿಕಾರಿ ಸುದರ್ಶನ, ಮಾಸ್ಟರ್ ಟ್ರೈನಿಗಳಾದ ಮಲ್ಲೇಶ ನಾಯಕ, ಮಧು ಸೇರಿದಂತೆ ಇತರರು ಇದ್ದರು. ಜಿಲ್ಲಾಧಿಕಾರಿಗಳ ಕಚೇರಿಯ ಸಾಮಾಜಿಕ ಭದ್ರತೆ ಮತ್ತು ಪಿಂಚಣಿಯ ಸಹಾಯಕ ನಿರ್ದೇಶಕರಾದ ಬಸವರಾಜ ನಾಗರಬೆಂಚಿ ಸ್ವಾಗತಿಸಿದರು. ವನಿತಾ ಅವರು ಕಾರ್ಯಕ್ರಮ ನಿರೂಪಿಸಿದರು.

## ಶ್ರೀನಿವಾಸ ಕ್ಯಾಂಪ್ ಸರ್ಕಾರಿ ಶಾಲೆಯಲ್ಲಿ ವಾರ್ಷಿಕೋತ್ಸವ ಬೀಳ್ಕೊಡುಗೆ ಸಮಾರಂಭ



ನೈಜ್ಯ ದೆಸೆ ನ್ಯೂಸ್

**ತಾಲೂಕಿನ ಶ್ರೀನಿವಾಸ ಕ್ಯಾಂಪಿನಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಾರ್ಷಿಕೋತ್ಸವ ಮತ್ತು 7ನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.**

ಮುಖ್ಯ ಶಿಕ್ಷಕರಾದ ದುರುಗಪ್ಪ ಗುಡದೂರು ಪ್ರಾಸ್ತಾವಿಕವಾಗಿ ಮಾತನಾಡಿದರು. ಅತಿಥಿ ಶಿಕ್ಷಕರಿಗೆ, ನೂತನ ಎಸ್.ಡಿ.ಎಮ್.ಸಿ ಸದಸ್ಯ-ರಿಗೆ ಹಾಗೂ ಅಡುಗೆ ಮಾಡುವ ಸಿಬ್ಬಂದಿಗೆ ಸನ್ಮಾನಿಸಿ ಗೌರವಿಸಲಾಯಿತು. ನಂತರ ಮಕ್ಕಳಿಗಾಗಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನುಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ: ಎಸ್.ಡಿ.ಎಂ.ಸಿ ಅಧ್ಯಕ್ಷ ಹುಚ್ಚಾರೆಡ್ಡಿ ಬಾಗಲವಾಡ, ಉಪಾಧ್ಯಕ್ಷ ಅಯ್ಯಪ್ಪ ಕೂಡ್ಲೂರು, ಸದಸ್ಯರಾದ ಮಲ್ಲೇಶ ನಾಯಕ, ಬಸವರಾಜ, ಲಕ್ಕಪ್ಪ, ಹನುಮಂತ, ಅಮರೇಶ, ಗ್ರಾಮ ಪಂಚಾಯಿತಿ ಸದಸ್ಯ ಟಿ.ವೆಂಕಟರೆಡ್ಡಿ, ಮುಖಂಡರಾದ ತಿಪ್ಪಣ್ಣ, ಸಂಗಪ್ಪ ಜೂಲಗುಡ್ಡ, ಜಲಾಲಪ್ಪ ಪನ್ನೂರು, ಕನಕದಾಸ ಸಂಘದ ಅಧ್ಯಕ್ಷ ದುರುಗಪ್ಪ ಮಾನೇಗಾರ, ಹಾಗೂ ಮಲ್ಲಿಕಾರ್ಜುನ, ಅಯ್ಯಪ್ಪ, ಶಿಕ್ಷಕರ ಸಂಘದ ಅಧ್ಯಕ್ಷ ಪ್ರಭಾಕರ ಕುಲಕರ್ಣಿ, ಕಾರ್ಯದರ್ಶಿ ಅಮರೇಶ, ಶಿಕ್ಷಕರಾದ ಯಮನೂರಪ್ಪ, ವೀರೇಶ, ತಿಮ್ಮಮ್ಮ, ಶ್ರೀದೇವಿ, ಹಾಗೂ ವಿದ್ಯಾರ್ಥಿಗಳು ಇದ್ದರು.

## ಲಿಂಗಸುಗೂರಿನ ಜಿಟಿಟಿಸಿ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಆಹ್ವಾನ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲೆಯ ಲಿಂಗಸುಗೂರಿನ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರವು (ಜಿಟಿಟಿಸಿ) ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುವ ಸ್ವಾಯತ್ತ ಸಂಸ್ಥೆಯಾಗಿದ್ದು, ಇಲ್ಲಿ ವಿವಿಧ ವಿಭಾಗದ ವಿಷಯಗಳನ್ನು ಬೋಧಿಸಲು ಅತಿಥಿ ಉಪನ್ಯಾಸಕರನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.**

ಬಿಇ ಇನ್ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಇಂಜಿನಿಯರಿಂಗ್ 01 ಹುದ್ದೆ, ಬಿ.ಇ ಇನ್ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ 01 ಹುದ್ದೆ, ಎಂಟೆಕ್ ಇನ್ ಮೆಕ್ಯಾನಿಕಲ್ ಇಂಜಿನಿಯರಿಂಗ್ 01 ಹುದ್ದೆ, ಎಂಟೆಕ್ ಇನ್ ಎಲೆಕ್ಟ್ರಾನಿಕ್ಸ್ ಮತ್ತು



ಕಮ್ಯುನಿಕೇಷನ್ ಇಂಜಿನಿಯರಿಂಗ್ 01 ಹುದ್ದೆಗೆ 01 ವರ್ಷದ ಬೋಧನೆ ಅಥವಾ ಕೈಗಾರಿಕಾ ಅನುಭವವನ್ನು ಅಭ್ಯರ್ಥಿಗಳು ಹೊಂದಿರಬೇಕು. ಆಸಕ್ತರು ಸ್ವ-ವಿವರವನ್ನು ಕಾಲೇಜಿನ ಇಮೇಲ್ ಐಡಿ: ರಣಣಜ.ಟುಟಿರಭೆಣರಣಡಿ@ರಟಚುಟ.ಛಿಂಟ ಗೆ ಕಳಿಸಿ, 2026ರ ಮಾರ್ಚ್ 16ರಿಂದ ಮಾರ್ಚ್18ರವರೆಗೆ ನಡೆಯುವ ಸಂದರ್ಶನದಲ್ಲಿ ಅಭ್ಯರ್ಥಿಗಳು ಭಾಗವಹಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಲಿಂಗಸುಗೂ-ರಿನ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರವನ್ನು ಕಚೇರಿಯ ಸಮಯದಲ್ಲಿ ಭೇಟಿ ನೀಡಿ ಮಾಹಿತಿ ಪಡೆಯಬಹುದಾಗಿದೆ. ಅಥವಾ ಮೊಬೈಲ್ ಸಂಖ್ಯೆ: 8548038965ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಲಿಂಗಸುಗೂ-ರಿನ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ ಪ್ರಾಂಶುಪಾಲರಾದ ಪ್ರತೀಬಾ ಪಾಟೀಲ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ: ರಂಗೋಲಿ ಸ್ಪರ್ಧೆ-ಆರೋಗ್ಯ ಇಲಾಖೆಯ ಮಹಿಳಾ ಸಿಬ್ಬಂದಿಯಿಂದ ಅರಳಿದ ಮಹಿಳೆಯರ ಆತ್ಮಗೌರವದ ಚಿತ್ತಾರಗಳು,

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಗತ್ತಿನಾದ್ಯಂತ ಮಹಿಳಾ ದಿನಾಚರಣೆಯು ಹೆಣ್ಣು ಮಕ್ಕಳ ಅಸ್ಥಿತ್ವ, ಗುರಿ ಸಾಧನೆಯನ್ನು ಜಗದೆಲ್ಲಡೆ ಪಸ-ರಿಸುವಂತೆ ಮಾಡುವ ಅಧ್ಭುತ ದಿನವಾಗಿದೆ. ಇಡಿ ಮಾರ್ಚ್ ತಿಂಗಳು ಮಹಿಳೆಯರ ಕಾರ್ಯ ಚಟುವಟಿಕೆಗಳನ್ನು ಗುರ್ತಿಸುವ ಕಾರ್ಯ ನಿರಂರವಾಗಿ ನಡೆಯುವುದು. ಹೆಣ್ಣು ತಾಯಿಯಾಗಿ, ಸಹೋದ-ರಿಯಾಗಿ, ಸ್ನೇಹಿತೆಯಾಗಿ, ಪತ್ನಿಯಾಗಿ, ಮಗಳಾಗಿ ತನ್ನದೇ ಆದ ಪಾತ್ರಗಳನ್ನು ನಿಭಾಯಿಸುತ್ತಾಳೆ.**

ಈ ಎಲ್ಲ ಪಾತ್ರಗಳನ್ನು ನಮ್ಮ ಸಾಮಾಜಿಕ ವ್ಯವಸ್ಥೆಯು ವಿವಿಧ ಆಯಾಮಗಳಿಂದ ವಯೋಮಾನದ ಆದ್ಯತೆಗೆ ಅನುಗುಣವಾಗಿ ಅವರನ್ನು ಅವಲಂಬಿಸುತ್ತದೆ. ಅವರಿಂದ ಪೊರೆಯಲ್ಪಡುತ್ತದೆ. ಇವೆಲ್ಲವುಗಳನ್ನು ತಮ್ಮ ಮನಸ್ಸಿನ ಕನಸುಗಳನ್ನು ರಂಗೋಲಿಯ ಸ್ಪರ್ಧೆಯ ಮೂಲಕ ರಾಯಚೂರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಿಬ್ಬಂದಿಯವರು ಕೃಷ್ಣ ಸಭಾಂಗಣದಲ್ಲಿ



ನಿರೂಪಿಸುವ ಪ್ರಯತ್ನ ಮಾಡಿದ್ದಾರೆ. ಭ್ರೂಣದ ಹಂತದಿಂದಲೆ ಹೆಣ್ಣಿನ ಕಾಳಜಿ ಮಾಡಿದರೆ ಕೇವಲ ತನಗಾಗಿಯಲ್ಲ, ಸಮಾಜ-ಕ್ಕೆ ವಿವಿಧ ಹುದ್ದೆಗಳಿಂದ ಸೇವೆ, ಕ್ರೀಡೆ ಮೂಲಕ ದೇಶಕ್ಕೆ ಕೊಡುಗೆಗಳ ಹೆಮ್ಮರವನ್ನೆ ನೀಡುವ ಅಧ್ಭುತ ಸಾಧಕಿಯಾಗುವಳು ಎಂಬ ನಾಗರತ್ನರ ಬಹುಬಣ್ಣದ ಚಿತ್ತಾರ ವಿಶೇಷವಾಗಿತ್ತು.

ಯಾವುದೇ ವೃತ್ತಿಪರ ಕಲಾವಿದ-ರಿಗೆ ಕಡಿಮೆ ಇಲ್ಲದಂತೆ ಧೈರ್ಯದಿಂದ ಮುಖ ಭಾವನೆಯೊಂದಿಗೆ ಹೆಣ್ಣಿನ ಜೀವನದ ಕನಸುಗಳಿಗೆ ಬಣ್ಣ ತುಂಬಿ ಎಂಬ ಕನಸಿನ ನುಡಿ ತಿಳಿಸಿದ ಸುವರ್ಣ ಅವರ ಧೈರ್ಯ ಅಸಾಧಾರಣವಾದುದು. ಆಲೋಚನೆಗಳನ್ನು ಕೃತಿರೂಪಕ್ಕೆ ಇಳಿಸಿ, ದೃಢ ವಿಶ್ವಾಸ, ಸಹನೆ, ಪ್ರಾಮಾಣಿಕತೆ, ಧೈರ್ಯ, ಮಮತೆ, ತಾಯ್ತನವನ್ನು ಪ್ರಕೃತಿಯ ರೂಪದಲ್ಲಿ ಶಾಲಿನಿ ರವರು ಕೊಂಡುಯ್ಯುವ ಪ್ರಯತ್ನ ಮಾಡಿದ್ದಾರೆ. ನಾರಿಶಕ್ತಿ ಸಮಾಜದ ಪ್ರಗತಿ ಎಂಬುದನ್ನು ಗ್ರಾಮೀಣ ಸೊಗಡಿನಲ್ಲಿ ತನ್ನ ಮಗುವನ್ನು ಮಮತೆಯ ಸಮುದ್ರದಲ್ಲಿ ತೆಲಿಸುವ ಪರಿಯುಳ್ಳ ಅಧ್ಭುತ ಕಲೆಯೊಂದಿಗೆ ಯಾವುದೇ ಜವಾಬ್ದಾರಿ ಪರಿಪೂರ್ಣವಾಗಿಸುವ ಗಟ್ಟಿತನವನ್ನು ಗೀತಾ ರವರು ತೋರಿಸುವ ಪ್ರಯತ್ನ ಮಾಡಿದ್ದಾರೆ.

ಆರೋಗ್ಯಕರ ತಾಯಿಗೆ ಆರೋಗ್ಯವಂತ ಮಗು, ಅದರಲ್ಲೂ ಹೆಣ್ಣು ಮಗು ಪ್ರಕೃತಿಯ ವರದಾನ, ಭ್ರೂಣ ಹತ್ಯೆ ಶಿಕ್ಷಾರ್ಹ ಅಪರಾಧ, ಹೆಣ್ಣುಮಗು ಉಳುಸಿ ಬೆಳಸಿ ಎಂಬ ಸಂದೇಶದೊಂದಿಗೆ ಮೇಘನಾ ರವರ ಕಲ್ಪನೆಯಲ್ಲಿ ಮೂಡಿದೆ. ಇವರ ಇನ್ನೊಂದು ಕೃತಿಯಲ್ಲಿ ಆರೋಗ್ಯ ಸುರಕ್ಷತೆಯಿಂದ ಸುಂದರ ಬದುಕು ಸಾಧ್ಯವೆಂದು ಕೈಯಲ್ಲಿ ಹಣತೆಯೊಂದಿಗೆ ಹೆಜ್ಜೆ ಹಾಕುವ ದೃಶ್ಯ ಹಾಗೂ ಸ್ಪರ್ಧೆಯಲ್ಲಿ ಭಾಗವಹಿಸಬೇಕು ಎಂಬ ಬಯಕೆಯೊಂದಿಗೆ ಸುಜಾತಾ ಜಮುನಾ ರವರ ನವಿಲು, ಲಕ್ಷ್ಮಿಯವರ ಮಹಿಳೆಯ ಮನಸ್ಸಿನ ಭಾವನೆ, ಶಾರದಾ ಅವರ ಸುಂದರ ರಂಗೋಲಿಗಳು ಆಕರ್ಷಕ ಚಿತ್ತಾರಗಳಾಗಿದ್ದವು.

ಅತ್ಯುತ್ತಮ ರಚನೆ ಎನ್ನುವುದಕ್ಕಿಂತ ಯಾವುದೇ ರೇಖಾಚಿತ್ರ ಬಳಸದೆ ಬಿಡಿಸಿದ ರಂಗೋಲಿಗಳಿಗೆ ಜೀವ ತುಂಬಿದ ಅರೋಗ್ಯ ಇಲಾಖೆಯ ಸಿಬ್ಬಂದಿಯವರ ಸ್ಪೂರ್ತಿ ಎಲ್ಲ-ರಿಗೂ ಮಾದರಿ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ಸುರೇಂದ್ರಬಾಬು ಹರ್ಷ ವ್ಯಕ್ತಪಡಿಸಿದರು. ತಿರ್ಪುಗಾರರಾದ ಡಾ ಶೀಲಶ್ರೀ ಪಾಟೀಲ್, ಡಾ ಗಣೇಶ್, ಡಾ ಮಹಮ್ಮದ್ ಶಾಕೀರ್ ರವರಿಂದ ಅಂತಿಮಗೊಳಿಸಿದ್ದು ಬಹುಮಾನವನ್ನು ಗಣ್ಯರ ಸಮ್ಮುಖದಲ್ಲಿ ನೀಡಲಾಗುವುದೆಂದು ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ ನಂದಿತಾ ಎಮ್ ಎನ್ ತಿಳಿಸಿದ್ದಾರೆ.

## ಸಾಹಿತ್ಯ ಸಿಂಚನ

### ಮಳೆ

ಮೋಡಗಳ ಮಡಿಲಲ್ಲಿ ಹುಟ್ಟಿದ ಮುತ್ತಿನ ಹನಿ,
ಭೂಮಿಯ ಎದೆಗೆ ಬೀಳುವ ಸಿಹಿ ನಿನಾದವಾಣಿ.
ಬಿಸಿಲಿನ ಬೆಂಕಿಯಲ್ಲಿ ಸುಟ್ಟಿದ ಮನಸಿಗೆ,
ಮಳೆಯ ಸ್ಪರ್ಶವು ತಂಪಿನ ಕನಸಿನ ಗಾನಿ.

ಗಾಳಿಯ ಜೊತೆಗೂಡಿ ನೃತ್ಯಮಾಡುವ ಹನಿಗಳು,
ಮರಗಳ ಎಲೆಗಳಲ್ಲಿ ಮುತ್ತಾಗಿ ಮಿನುಗುವವು.
ಮಣ್ಣಿನ ಸುಗಂಧದಿಂದ ತುಂಬಿದ ಈ ಕ್ಷಣ,
ಪ್ರಕೃತಿಯ ಪ್ರೀತಿ ನಮ್ಮ ಮನ ತುಂಬಿಸುವವು.


ಕೊಳಗಳ ಕಂಗೊಳದಲ್ಲಿ ಆಕಾಶದ ಪ್ರತಿಬಿಂಬ,
ಮಕ್ಕಳ ನಗುವಿನಲ್ಲಿ ಮಳೆಯ ಸಿಹಿ ಸಂಭ್ರಮ.
ಮಳೆ ಬಂದಾಗ ಭೂಮಿ ಹಾಡುವ ಹೊಸ ಗೀತ,
ಜೀವನದ ಹಾಡಿಗೆ ಸೇರಿಸುವ ಸುಂದರ ರಾಗ.

ರಘು ಕೆ

# ಪಡೇಕನೂರ ಗ್ರಾಮಕ್ಕೆ ಸಿಇಒ ರಿಷಿ ಆನಂದ ಭೇಟಿ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ತಾಲೂಕಿನ ಕೊಣ್ಣೂರ ಗ್ರಾಮ ಪಂಚಾಯತಿಯ ಪಡೇಕನೂರ ಗ್ರಾಮಕ್ಕೆ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಿಷಿ ಆನಂದ ಅವರು ಬುಧವಾರ ಭೇಟಿ ನೀಡಿ ಮೂಲಸೌಕರ್ಯಗಳ ಕುರಿತು ಪರಿಶೀಲನೆ ನಡೆಸಿದರು.**



ಪಡೇಕನೂರ ಗ್ರಾಮದೊಳಗಿನ ಬಾಕಿ ರಸ್ತೆಗಳ ಸಿಸಿ, ಚರಂಡಿ ನಿರ್ಮಾಣ ಮತ್ತು ಪಡೇಕನೂರ ಗ್ರಾಮದಿಂದ ಕೊಣ್ಣೂರ ಗ್ರಾಮದವರೆಗೆ ಸಿಸಿ ರಸ್ತೆ ನಿರ್ಮಾಣದ ಅವಶ್ಯಕತೆ ಕುರಿತು ಪರಿಶೀಲನೆ ಮಾಡಿದರು. ಪಡೇಕನೂರ ಗ್ರಾಮದಿಂದ ಹಳ್ಳೂರ ಗ್ರಾಮದವರೆಗಿನ ರಸ್ತೆ ನಿರ್ಮಾಣ ಕಾಮಗಾರಿಯನ್ನು ಪರಿಶೀಲಿಸಿ ನಿಗದಿತ ಸಮಯದೊಳಗೆ ಪೂರ್ಣಗೊಳಿಸಲು ಕ್ರಮವಹಿಸಲು ಡಬ್ಲ್ಯೂಇ ವಿದ್ಯಾಧರ ನ್ಯಾಮನಗೌಡ ಅವರಿಗೆ ಗುಣಮಟ್ಟದ ಕಾಮಗಾರಿ ಮಾಡಲು ಸೂಚಿಸಿದರು. ನಂತರ ಪಡೇಕನೂರ ಗ್ರಾಮದ ಅಂಗನವಾಡಿ ಕೇಂದ್ರ-3 ಕ್ಕೆ ಭೇಟಿ ನೀಡಿ ಮಕ್ಕಳ ಹಾಜರಾತಿ ಮತ್ತು ಮಕ್ಕಳಿಗೆ ಉತ್ತಮ ಗುಣಮಟ್ಟದ ಅಹಾರ ನೀಡುತ್ತಿರುವ ಕುರಿತು ಪರಿಶೀಲಿಸಿ, ಸಮಯಕ್ಕೆ ಸರಿಯಾಗಿ ಮಕ್ಕಳ ಪೌಷ್ಟಿಕ ಆಹಾರವನ್ನು ತಯಾರಿಸಿ ಉಣಬಡಿಸಬೇಕು. ಬೇಸಿಗೆ ಪ್ರಾರಂಭವಾಗಿದ್ದು, ಆದಷ್ಟು ನೆರಳಲ್ಲೆ ಮಕ್ಕಳ ಪಾಲನೆ ಮಾಡಬೇಕು ಎಂದು ಅಂಗನವಾಡಿ ಕಾರ್ಯಕರ್ತೆಗೆ ಸೂಚಿಸಿದರು. ಈ ಸಂದರ್ಭದಲ್ಲಿ ಪಿ.ಆರ್.ಇ.ಡಿ. ಡಬ್ಲ್ಯೂಇ ವಿದ್ಯಾಧರ ನ್ಯಾಮನಗೌಡ, ಎ.ಡಬ್ಲ್ಯೂ ಶಿವರಾಜ ನಾಯಕ, ಅಭಿಯಂತರ ಸಂತೋಷ ಲಮಾಣಿ ಇದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಕರುಣೆಯ ಕಾರುಣ್ಯ ಕುಟುಂಬದ ಅಂತರಾಳದ ಅನಿಸಿಕೆ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಸುಮಾರು ವರ್ಷಗಳಿಂದ ಸಿಂಧನೂರು ತಾಲೂಕಿನ ಹರೇಟನೂರು ಗ್ರಾಮದ ಆದಿಶಕ್ತಿ ಶ್ರೀ ದ್ಯಾವಮ್ಮ ದೇವಿಯ ಅರ್ಚಕರಾದ ವೇದಮೂರ್ತಿ ಅಮರಯ್ಯ ಸ್ವಾಮಿ ಹಿರೇಮಠ ಅವರು ಆ ತಾಯಿಗೆ ಬಂದಿರುವಂತಹ ಮಂಗಳಾರತಿ ತಟ್ಟೆಯ ಕಾಣಿಕೆ ಹಾಗೂ ದವಸ ಧಾನ್ಯಗಳು ಅನಾಥರಿಗೆ ನೊಂದವರಿಗೆ ಬುದ್ಧಿಮಾಂದ್ಯ-ರಿಗೆ ಉಪಯೋಗವಾಗಲಿ ಎನ್ನುವ ಸಾರ್ವಜನಿಕ ಸಾಮಾಜಿಕ ಪ್ರಜ್ಞೆಯಿಂದ ಶ್ರೀಮಠ ಸೇವಾ ಟ್ರಸ್ಟ್ (ರಿ) ಹರೇಟನೂರು ಎನ್ನುವ ಟ್ರಸ್ಟ್ ಅಡಿಯಲ್ಲಿ ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮವನ್ನು ಹುಟ್ಟು ಹಾಕಿದರು.**

ಈ ಟ್ರಸ್ಟ್ ನ ಉಪಾಧ್ಯಕ್ಷರಾಗಿ ಕ-ರಿಬಸಯ್ಯಸ್ವಾಮಿ ಹಿರೇಮಠ ಹರೇಟನೂರು. ಪ್ರಧಾನ ಕಾರ್ಯದರ್ಶಿಗಳಾಗಿ ಕೆ.ಚಿದಾನಂದಪ್ಪ ಗೌಡ ಮಾಲಿ ಪಾಟೀಲ್ ಖಜಾಂಚಿಗಳಾಗಿ ಕೆ.ಸಂಗನಗೌಡ ಮಾಲಿ ಪಾಟೀಲ್ ಸದಸ್ಯರುಗಳಾಗಿ ಶರಣಪ್ಪ ಗೌಡ ಕಟಾಲಿ ಮಂಜುನಾಥಗೌಡ ಮಾಲಿಪಾಟೀಲ್ ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಕರಡಕಲ್.



ಅಶೋಕ ನಲ್ಲ. ಸುಜಾತ ಹಿರೇಮಠ ಇವರುಗಳ ಒಗ್ಗೂಡಿನ ಸಾಕಾರದೊಂದಿಗೆ ಹುಟ್ಟು ಹಾಕಿದರು. ಕೊರೋನಾ ಎನ್ನುವ ಲಾಕ್ ಡೌನ್ ನಲ್ಲಿ ಅದೆಷ್ಟೋ ನಿರ್ಗತಿಕ ಹಾಗೂ ಬಸ್ ನಿಲ್ದಾಣಗಳಲ್ಲಿ ಮತ್ತು ಇನ್ನಿತರ ಸಾರ್ವಜನಿಕ ಸ್ಥಳದಲ್ಲಿ ಇರುವಂತಹ ಅನಾಥರಿಗೆ ತಮ್ಮ ಜೋಳಿಗೆಯ ಮೂಲಕ ಆಸರೆಯಾದರು.

ಮತ್ತು ಸರ್ಕಾರದಿಂದ ಜಿಲ್ಲಾಡಳಿತದಿಂದ ತಾಲೂಕಾಡಳಿತದಿಂದ ಮತ್ತು ನಮ್ಮ ರಾಜ್ಯದ ಹಾಗೂ ಅನೇಕ ರಾಜ್ಯದ ಸಂಘ ಸಂಸ್ಥೆಗಳು ಹಲವಾರು ಪ್ರಶಸ್ತಿಗಳನ್ನು ವಿತರಿಸಿ ಗೌರವಿಸಿ ಸಾಮಾಜಿಕ ಜವಾಬ್ದಾ-ರಿಯನ್ನು ಹೆಚ್ಚಿಸಿದ್ದಾರೆ. ಇಂತಹ ಪ್ರಾಮಾಣಿಕ ಸೇವೆಯನ್ನು ಸಮಾಜಕ್ಕೆ ಒದಗಿಸುತ್ತಿರುವ ಈ ಕರುಣೆಯ ಕಾರುಣ್ಯ ಕುಟುಂಬಕ್ಕೆ ಸರ್ಕಾರದ ಯಾವುದೇ ಸೌಲಭ್ಯಗಳು ದೊರೆಯದಿರುವುದು ದುರದೃಷ್ಟಕರ ಸಂಗತಿ

ಮತ್ತು ವಿಶೇಷವಾಗಿ ಸುಮಾರು ಜನ ನೊಂದವರನ್ನು ಮತ್ತು ಮನೆಯಿಂದ ಅನೇಕ ಕಾರಣಗಳಿಂದ ಹೊರಬಂದು ಈ ನಮ್ಮ ಕಾರುಣ್ಯ ಕುಟುಂಬದಲ್ಲಿ ಆಶ್ರಯ ಪಡೆದವರು ವೃದ್ಧರನ್ನು ಅವರ ಮಕ್ಕಳು ಮೊಮ್ಮಕ್ಕಳಿಗೆ ಬುದ್ಧಿವಾದ ಹೇಳುವುದರ ಮೂಲಕ ಅವರವರ ಮನೆಗೆ ಕಳುಹಿಸಿದ್ದೇವೆ.

ನಿಜವಾದ ಅನಾಥರಿಗೆ ತಮಗರಿವಿಲ್ಲದ ಬುದ್ಧಿಮಾಂಧ್ಯರಿಗೆ ಆಶ್ರಮದಲ್ಲಿ ಆಶ್ರಯ ಕಲ್ಪಿಸಿ ಕೊಟ್ಟಿದ್ದೇವೆ. ಇದು ಸಮಾಜದ ಸೇವೆಯಲ್ಲ ಸಮಾಜಕ್ಕೆ ನಾವು ಮಾಡುವ ಪ್ರಾಮಾಣಿಕ ಕರ್ತವ್ಯ ಎನ್ನುವ ಆತ್ಮ ತೃಪ್ತಿ ನಮಗಿದೆ ಆದ-ಏದರಿಂದ ಸಾರ್ವಜನಿಕರಲ್ಲಿ ಮತ್ತೊಮ್ಮೆ ಕಾರುಣ್ಯ ಕುಟುಂಬದ ವಿನಂತಿ ಏನಂದರೆ ತಾವುಗಳು ಸ್ವಂತ ಜಾಗ ಕಲ್ಪಿಸಿಕೊಟ್ಟಲ್ಲಿ ನಮ್ಮೆಲ್ಲರ ಪ್ರೀತಿ ವಿಶ್ವಾಸ ಆಶೀರ್ವಾದದೊಂದಿಗೆ ಇನ್ನೂ ಹೆಚ್ಚಿನ ಅನಾಥರಿಗೆ ಆಶ್ರಯ ಕಲ್ಪಿಸಿ ಕೊಡುತ್ತೇವೆ ಎಂದು ಆಶ್ರಮದ ಕಾರ್ಯಾಧ್ಯಕ್ಷರಾಗಿರುವಂತಹ ಡಾ.ಚನ್ನಬಸವ ಸ್ವಾಮಿ ಹಿರೇಮಠ ಹರಟನೂರು ಅವರು ಪತ್ರಿಕಾ ಬಳಗದೊಂದಿಗೆ ತಮ್ಮ ನೋವನ್ನು ತೋಡಿಕೊಂಡರು.

ಈ ಸಮಯದಲ್ಲಿ ಆಶ್ರಮದಲ್ಲಿ ಆಶ್ರಯ ಪಡೆದ 80 ವರ್ಷದ ಜಯಮ್ಮ ಸಿಂಧನೂರು ಹಾಗೂ ನಾಡಿನ ಜನರು ಕಾರುಣ್ಯ ಎನ್ನುವ ಕುಟುಂಬಕ್ಕೆ ಸಹಾಯ ಮಾಡುವುದರ ಮೂಲಕ ನಮ್ಮ ಜೀವನ ಬದುಕಿಗೆ ಆಸರೆಯಾದ ತಮ್ಮೆಲ್ಲ-ರಿಗೂ ಒಳ್ಳೆಯದಾಗಲಿ ಬಡಜಂಗಮರಾದ ಪರೇಟನೂರಿನ ಜಂಗಮ ಕುಟುಂಬದವರು ನಮ್ಮನ್ನು ಸ್ವಂತ ತಂದೆ ತಾಯಿಗಳ ಹಾಗೆ ಪ್ರೀತಿ ತೋರಿಸಿ ನಮ್ಮೆಲ್ಲರ ಹಿಂದಿನ ನೋವನ್ನು ಮರೆಸಿ ಸ್ವರ್ಗದಂತೆ ನಮ್ಮ ಕಾರುಣ್ಯ ಕುಟುಂಬವನ್ನು ನಿರ್ವಹಣೆ ಮಾಡುತ್ತಿರುವುದು ನಮ್ಮೆಲ್ಲರ ಪೂರ್ವಜನ್ಮದ ಪುಣ್ಯವಾಗಿದೆ ಎಂದು ಭಾವನಾತ್ಮಕವಾದಂತಹ ನುಡಿಗಳನ್ನು ನುಡಿದರು.

# ನೋಬಲ್ ಟೆಕ್ನೋ ಶಾಲೆಯ ವಿದ್ಯಾರ್ಥಿಗಳು ವಿಶ್ವಮ್ ಎಜುಟೆಕ್ ಸಂಸ್ಥೆ ನಡೆಸಿದ ಸ್ಪೆಲ್ ಬಿ (Spell Bee) ಆನ್ ಲೈನ್ ಸ್ಪರ್ಧೆಯಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆ




ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಸಿಂಧನೂರಿನ ನೋಬಲ್ ಟೆಕ್ನೋ ಶಾಲೆಯ ವಿದ್ಯಾರ್ಥಿಗಳು ವಿಶ್ವಮ್ ಎಜುಟೆಕ್ ಸಂಸ್ಥೆ ನಡೆಸಿದ ಕಲ್ಬುರ್ಗಿ ಝೋನಲ್ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿ ಝೋನಲ್ ಮಟ್ಟದಲ್ಲಿ ಪ್ರಥಮ ಸ್ಥಾನವನ್ನು ಪಡೆದು ರಾಜ್ಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.**

ರಾಜ್ಯ ಮಟ್ಟದ ಸ್ಪರ್ಧೆಗಳು ಮಾರ್ಚ್ 14, 2026 ಶನಿವಾರದಂದು ಆಂಧ್ರ ಪ್ರದೇಶದ ಅನಂತಪುರದಲ್ಲಿ ನಡೆಯಲಿದ್ದು ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ.

ರಾಜ್ಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾದ ವಿದ್ಯಾರ್ಥಿಗಳು:

ಶ್ರೀನಿಧಿ -3ನೇ ತರಗತಿ
ರೂಪಿಕಾ - 4ನೇ ತರಗತಿ
ವೇಣು - 5ನೇ ತರಗತಿ
ಅಲಿಯಾ - 6ನೇ ತರಗತಿ

ಈ ವಿದ್ಯಾರ್ಥಿಗಳನ್ನು ಮುಂದಿನ ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಉತ್ತಮ ಸಾಧನೆ ಮಾಡಿ ಪ್ರಥಮ ಸ್ಥಾನವನ್ನು ಪಡೆದು ಅಮೆರಿಕದಲ್ಲಿ ನಡೆಯುವ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಲಿ ಎಂದು ನೋಬಲ್ ಟೆಕ್ನೋ ಶಾಲೆಯ ಪ್ರಾಂಶುಪಾಲರು ಹಾಗೂ ಶಿಕ್ಷಕ ವೃಂದ ಶುಭಾಶಯಗಳನ್ನು ಕೋರಿದರು.

ನೋಬಲ್ ಟೆಕ್ನೋ ಶಾಲೆಯ ವತಿಯಿಂದ ವಿದ್ಯಾರ್ಥಿಗಳ ಪ್ರತಿಭೆಯನ್ನು ಉತ್ತೇಜಿಸಲು ವಿವಿಧ ಸ್ಪರ್ಧೆಗಳು ಹಾಗೂ ಚಟುವಟಿಕೆಗಳನ್ನು ನಿರಂತರವಾಗಿ ಆಯೋಜಿಸಲಾಗುತ್ತಿದೆ. ಎಂದು ನೋಬಲ್ ಟೆಕ್ನೋ ಶಾಲೆಯ ಆಡಳಿತಾಧಿಕಾರಿ ಸೈಯದ್ ತನವೀರ ಪತ್ರಿಕೆಗೆ ಮಾಹಿತಿಯನ್ನು ನೀಡಿದರು.

# ಜೋಳದರಾಶಿಕ್ಯಾಂಪಗೆ ಮೂಲಭೂತ ಸೌಲಭ್ಯಗಳ ಕೊರತೆ ವಿದ್ಯಾರ್ಥಿಗಳು, ಜನರು ಆಕ್ರೋಶ

ನೈಜ್ಯ ದೆಸೆ ನ್ಯೂಸ್

**ಹಾಲಾಪೂರ: ಗ್ರಾಮ ಪಂಚಾಯಿತಿ ವ್ಯಾಪ್ತಿಯ ಜೋಳದರಾಶಿಕ್ಯಾಂಪ ಇದು ಮಸ್ಕಿ ರಾಯಚೂರು ಮುಖ್ಯರಸ್ತೆಗೆ ಒಳಪಡುವ ಈ ಒಂದು ಗ್ರಾಮವು ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿದೆ ಎಂದು ಸ್ಥಳೀಯರಾದ ಮಹೇಶಗೌಡ ವಡಿಗೇರಿ ಮಾತನಾಡುತ್ತಾ ಇಲ್ಲಿ ಮುಖ್ಯವಾಗಿ ಇದು ಯಾವ ಊರು ಎಂಬುದೇ ನಾಮಫಲಕ ಇಲ್ಲ, ಬಸ್ ನಿಲ್ದಾಣ ಇಲ್ಲ ಇದರಿಂದ ವಿದ್ಯಾರ್ಥಿಗಳಿಗೆ, ಜನರಿಗೆ ತುಂಬಾ ತೊಂದರೆಯಾಗಿದೆ,**

ಶುದ್ಧ ಕುಡಿಯುವ ನೀರಿನ ಘಟಕ ಮಾಡಬೇಕು ಈಗಾಗಲೇ ಸ್ಥಳೀಯ ಶಾಸಕರಿಗೆ, ಗ್ರಾಮ ಪಂಚಾಯಿತಿಗೆ ಮನವಿ ಸಲ್ಲಿಸಿದರು ಯಾವುದೇ ಕೆಲಸವಾಗಿಲ್ಲ ಈಗಾಗಲೇ ಬಿರು ಬಿಸಿಲು ಬೇಸಿಗೆ ಆರಂಭವಾಗಿದೆ ಶಾಲಾ ಕಾಲೇಜು ವಿದ್ಯಾರ್ಥಿಗಳು ನಿಲ್ಲಲು, ಕೂಡಲು ವ್ಯವಸ್ಥೆ ಇಲ್ಲ, ಸರಿಯಾದ ಶುದ್ಧ ನೀರಿನ ವ್ಯವಸ್ಥೆ ಇಲ್ಲ ತುಂಬಾ ತೊಂದರೆ ಆಗಿದೆ ಎಂದು ಹೇಳಿದರು. ಹಾಗೆ ಭಾಷಾ ಎನ್ನುವ ಯುವಕನಿಗೆ ಮನೆ ಇಲ್ಲ, ಮೂಲತಃ ಭಾಷಾ ರವರು ಅಂಗವಿಕಲರಾಗಿದ್ದು ಕೆಲಸ ಮಾಡಲು ಆಗುವುದಿಲ್ಲ ಈಗ ಆತನು



ಸರ್ಕಾರಿ ಶಾಲೆಯಲ್ಲಿ ವಾಸ ಮಾಡುತ್ತಿದ್ದು, ಅಲ್ಲಿ ಕೂಡ ಶಾಲೆ ಬಿಡಲು ಅಧಿಕಾರಿಗಳು ಹೇಳುತ್ತಿದ್ದು ಇದ-ರಿಂದ ಜೀವನದಲ್ಲಿ ಜಿಗುಪ್ಸೆಗೊಂಡದ್ದು, ಈ ಬಗ್ಗೆ ಸಹಾಯಕ್ಕಾಗಿ ಅಧಿಕಾರಿಗಳಿಗೆ ಜನಪ್ರತಿನಿಧಿಗಳಿಗೆ ಹತ್ತಾರು ಬಾರಿ ಹೇಳಿದರೂ ಯಾವುದೇ ಸಣ್ಣ ಸಹಾಯ ಇಲ್ಲ ಎಂದು ಬಹಳಷ್ಟು ನೋವಿನಿಂದ ತಮ್ಮ ಸಮಸ್ಯೆಯನ್ನು ಹೇಳಿದರು. ಈ ವೇಳೆಯಲ್ಲಿ ಬಸವರಾಜಗೌಡ ತುಂಟಾಪುರ, ರಮೇಶ್ ವೈಟ್ಲ, ವಿಶ್ವನಾಥ ರೆಡ್ಡಿ, ಬಸವರಾಜಗೌಡ ಯಮ್ಮಿಗನೂರು, ಮಲ್ಲಯ್ಯಸ್ವಾಮಿ, ಎನ್ ನಾಗೇಶ್ವರ ರಾವ್, ಬಸಪ್ಪ ಬೋವಿ, ಗೂಳಯ್ಯಸ್ವಾಮಿ, ಹುಚ್ಚಪ್ಪ ನಾಯಕ, ಚನ್ನಬಸಯ್ಯ, ಜಗದೀಶ ತಾತ, ಅಮರೇಗೌಡ ಇನ್ನಿತರರು ಇದ್ದರು.

# ತಾಳಿಕೋಟೆಯಲ್ಲಿ ಸೌಹಾರ್ದ ಇಫ್ತಾರ ಕೂಟ ಪ್ರವಚನಕಾರ ಲಾಲಹುಸೇನ ಕಂದಗಲ್ಲ ಸಲಹೆ ಧರ್ಮಗಳನ್ನು ಗೌರವಿಸುವ ಹೃದಯ ವೈಶಾಲ್ಯತೆ ಬೆಳೆಸಿಕೊಳ್ಳಿ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಜಗತ್ತಿನಲ್ಲಿರುವ ಎಲ್ಲ ಧರ್ಮಗಳು ಪ್ರೀತಿ ಮತ್ತು ಶಾಂತಿಯನ್ನೇ ಬೋಧಿಸಿವೆ ಪ್ರತಿಯೊಬ್ಬರು ತಮ್ಮ ಧರ್ಮಗಳನ್ನು ಪ್ರೀತಿಸುವುದರೊಂದಿಗೆ ಇತರ ಧರ್ಮಗಳನ್ನು ಗೌರವಿಸುವ ಹೃದಯ ವೈಶಾಲ್ಯತೆಯನ್ನು ಬೆಳೆಸಿಕೊಳ್ಳುವ ಅಗತ್ಯ ಇದೆ ಎಂದು ಖ್ಯಾತ ಪ್ರವಚನಕಾರ ಲಾಲಹುಸೇನ ಕಂದಗಲ್ಲ ಹೇಳಿದರು. ಪಟ್ಟಣದ ಜಾಮಿಯಾ ಮಸೀದಿಯಲ್ಲಿ ಜಮಾತೆ ಇಸ್ಲಾಮಿ ಹಿಂದ್ ನಗರ ಶಾಖೆಯು ಪವಿತ್ರ ರಮಜಾನ್ ಮಾಸದ ನಿಮಿತ್ಯ ಆಯೋಜಿಸಿದ ಸೌಹಾರ್ದ ಇಫ್ತಾರ ಕೂಟ ಕಾರ್ಯಕ್ರಮದಲ್ಲಿ ಮಂಗಳವಾರ ಮಾತನಾಡಿದರು.**

ದೇವಭಯದ ಗುಣ ಬೆಳಸಲಿಕ್ಕಾಗಿ ಮುಸ್ಲಿಂರ ಮೇಲೆ ರಮಜಾನ್ ಉಪವಾಸ ವೃತಗಳನ್ನು ಕಡ್ಡಾಯಗೊಳಿಸಲಾಗಿದೆ. ನಾನು ಎಲ್ಲಿದ್ದರೂ ನನ್ನ ಸೃಷ್ಟಿಕರ್ತ ನನ್ನನ್ನು ನೋಡುತ್ತಿದ್ದಾನೆ ಎಂಬ ಪ್ರಜ್ಞೆ ಒಬ್ಬ ವ್ಯಕ್ತಿಯಲ್ಲಿ ಬಂದಾಗ ಅವನು ಎಲ್ಲ ರೀತಿಯ ಕೆಡುಕು ಮತ್ತು ಅಪರಾಧಗಳಿಂದ ಉಳಿಯುತ್ತಾನೆ. ಉಪವಾಸ ವೃತ್ತಗಳ




ಮೂಲಕ ಒಬ್ಬ ವ್ಯಕ್ತಿಯಲ್ಲಿ ಹಸಿವಿನ ಅರಿವನ್ನು ಮೂಡಿಸಲಾಗುತ್ತದೆ ಬಡವರ ಕಷ್ಟಗಳಿಗೆ ಸ್ಪಂದಿಸುವ ಗುಣ ಇದರಿಂದ ಬೆಳೆಯುತ್ತದೆ.ರಮಜಾನ ಕರುಣೆ, ಸಹಾನುಭೂತಿಯ ಮಾಸವಾಗಿದೆ. ಭೂಮಿಯ ಮೇಲೆ ಇರುವಷ್ಟು ದಿನ ಒಳ್ಳೆಯ ವ್ಯಕ್ತಿ ಗಳಾಗಿ ಬದುಕಬೇಕು ನಾವೆಲ್ಲರೂ ಒಂದು ದಿನ ಈ ಜಗತ್ತನ್ನು ತೊರೆಯಬೇಕಾಗಿದೆ ಆ ದೇವನು ನಾವು ಮಾಡಿದ ಎಲ್ಲ ಕರ್ಮಗಳ ಲೆಕ್ಕವನ್ನು ನಮ್ಮಿಂದ ಪಡೆಯಲಿಕ್ಕಿದ್ದಾನೆ ಎಂಬ ಜಾಗೃತ ಪ್ರಜ್ಞೆಯೊಂದಿಗೆ ನಾವೆಲ್ಲರೂ ಬದುಕಬೇಕಾಗಿದೆ ಎಂದರು.

ಕ್ಷೇತ್ರ ಸಮನ್ವಯಾಧಿಕಾರಿ ಆರ್.ಬಿ. ದಮ್ಮೂರಮಠ ಹಾಗೂ ಸಮಾಜ ಸೇವಕ ಸಿ.ಬಿ.ಅಸ್ಕಿ ಮಾತನಾಡಿ ಎಲ್ಲಾ ಧರ್ಮೀಯರು ಒಂದಾಗಿ ಸೌಹಾರ್ದದಿಂದ ಬದುಕಿದಾಗ ಮಾತ್ರ ದೇಶದಲ್ಲಿ ಶಾಂತಿ ಹಾಗೂ ಸುಭಿಕ್ಷೆ ಬರಲು ಸಾಧ್ಯ ಇಂತಹ ಸೌಹಾರ್ದ ಕಾರ್ಯಕ್ರಮ



ಆಯೋಜಿಸಿದ ಸಂಘಟಕರಿಗೆ ಅಭಿನಂದಿಸುತ್ತೇವೆ ಎಂದರು. ವೇದಮೂರ್ತಿ ಮುರುಗೇಶ ವಿರಕ್ತಮಠ ಸಾನಿಧ್ಯ ವಹಿಸಿ ಮಾತನಾಡಿ ಪಟ್ಟಣದಲ್ಲಿ ಎಲ್ಲರೂ ಒಂದಾಗಿ ಪ್ರೀತಿ ಮತ್ತು ವಿಶ್ವಾಸದಿಂದ ಬದುಕುತ್ತಿದ್ದೇವೆ ಖಾಸ್ಗತಜ್ಜನ ಕೃಪೆ ನಮ್ಮೆಲ್ಲರ ಮೇಲಿದೆ ಇಂತಹ ಅರ್ಥಪೂರ್ಣ ಕಾರ್ಯಕ್ರಮ ಆಯೋಜಿಸಿದ ಜಮಾತ್ ಪದಾಧಿಕಾರಿಗಳಿಗೆ ಅಭಿನಂದಿಸುತ್ತೇನೆ ಎಂದರು. ಪತ್ರಕರ್ತ ಅಬ್ದುಲ್ ಗನಿ ಮಕಾನದಾರ ಪ್ರಸ್ತಾವಿಕವಾಗಿ ಮಾತನಾಡಿದರು.

ಮುಸ್ಲಿಂ ಧಾರ್ಮಿಕ ಮುಖಂಡ ಸಯ್ಯದ್ ಶಕೀಲ ಅಹ್ಮದ್ ಖಾಜಿ ಸಾನಿಧ್ಯ ವಹಿಸಿದ್ದರು, ವೇದಿಕೆ ಕಾರ್ಯಕ್ರಮದ ನಂತರ ಸಾಮೂಹಿಕ ಇಫ್ತಾರದ ವ್ಯವಸ್ಥೆಯನ್ನು ಮಾಡಲಾಗಿತ್ತು. ಜಮಾತೆ ಇಸ್ಲಾಮಿ ಹಿಂದ್ ಜಿಲ್ಲಾ ಸಂಚಾಲಕ ಅಬ್ದುಲ್ ರೆಹಮಾನ ನಾಸೀರ,ಜಾಮಿಯಾ ಮಸೀದಿ ಅಧ್ಯಕ್ಷ ಕೆ.ಐ.ಸಗರ,ರೆಡ್ಡಿ ಸಮಾಜದ ಅಧ್ಯಕ್ಷರಾದ ಎಚ್ಎಸ್ ಪಾಟೀಲ, ಕಾಂಗ್ರೆಸ್ ಮುಖಂಡ ಪ್ರಭುಗೌಡ ಮದರಕಲ್ಲ, ದಲಿತ ಮುಖಂಡ ಜೈ ಭೀಮ್ ಮುತ್ತಗಿ, ಮಹಾಂತೇಶ ಮುರಾಳ, ಶಿವಾನಂದ ಹೂಗಾರ, ರವೀಂದ್ರ ಕಟ್ಟಿಮನಿ, ಅಶೋಕ ಚಿನಗುಡಿ,ಡಾ.ಸೋಮಶೇಖರಯ್ಯ ಹಿರೇಮಠ, ಸಿಆರ್ಸಿ ಬಾಲಾಜಿ ವಿಜಾಪುರ, ಶಿಕ್ಷಕ ರಾಜಶೇಖರ ಹಿರೇಮಠ, ಸುರೇಶ ಬೀರಗೊಂಡ, ಆಸೀಫ್ ಕೆಂಭಾವಿ, ಗೋಪಾಲ ಕಟ್ಟಿ ಮನಿ, ಡಾ.ಎ.ಎ.ನಾಲಬಂದ,ಡಾ.ನಜೀರ ಕೋಳ್ಯಾಳ,ಎ.ಡಿ. ಎಕೀನ, ರೋಶನ ಡೋಣಿ, ಎಂ.ಎ.ಮೇತ್ರಿ, ಹಸನಸಾಬ ಮನಗೂಳಿ,ಎಸ್.ಎ.ನಾಲಬಂದ ಹಾಗೂ ಸರ್ವ ಸಮಾಜದ ಗಣ್ಯರು ಹಿರಿಯರು ಉಪಸ್ಥಿತರಿದ್ದರು. ಜಮಾತೆ ಇಸ್ಲಾಮಿ ಹಿಂದ್ ನಗರ ಅಧ್ಯಕ್ಷ ಮುಜಾಹೀದ ನಮಾಜಕಟ್ಟಿ ಕಾರ್ಯಕ್ರಮ ನಿರೂಪಿಸಿ ಕೊನೆಯಲ್ಲಿ ವಂದಿಸಿದರು.

## ನೇಮಕಾತಿ ಪ್ರಕಟಣೆ

CEL ನೇಮಕಾತಿ 2026: 34 ಡೆಪ್ಯೂಟಿ ಜನರಲ್ ಮ್ಯಾನೇಜರ್ ಮತ್ತು ಎಂಜಿನಿಯರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಸೆಂಟ್ರಲ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಫೆಬ್ರವರಿ 2026 ರ ಅಧಿಕೃತ ಅಧಿಸೂಚನೆಯ ಮೂಲಕ ಡೆಪ್ಯೂಟಿ ಜನರಲ್ ಮ್ಯಾನೇಜರ್ ಮತ್ತು ಎಂಜಿನಿಯರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಹೈದರಾಬಾದ್–ತೆಲಂಗಾಣ, ಬೆಂಗಳೂರು–ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 03–ಮಾರ್ಚ್–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು (14–03–2026 ರವರೆಗೆ ವಿಸ್ತರಿಸಲಾಗಿದೆ) ಅಧಿಕೃತ ವೆಬ್‌ಸೈಟ್: celindia.co.in

## ಚಿತ್ರಕಲಾವಿದ ಸತೀಶ ಕೇಮಶೆಟ್ಟಿಗೆ "ಸಂಸ್ಕಾರ ರತ್ನ" ಪ್ರಶಸ್ತಿ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ದೇವರ ಹಿಪ್ಪರಗಿ ತಾಲೂಕಿನ ಯಾಳವಾರ ಗ್ರಾಮದಲ್ಲಿರುವ ಸಂಸ್ಕಾರಧಾಮ ಪೂರ್ವ ಪ್ರಾಥಮಿಕ ಹಾಗೂ ಕಿರಿಯ ಪ್ರಾಥಮಿಕ ಶಾಲೆಯ ವತಿಯಿಂದ ನಡೆಯಲಿರುವ ಸಂಸ್ಕಾರ ಉತ್ಸವ ಹಾಗೂ 14ನೇ ವರ್ಷದ ವಾರ್ಷಿಕ ಸ್ನೇಹ ಸಮ್ಮೇಳನ ಕಾರ್ಯಕ್ರಮದ ಅಂಗವಾಗಿ ಜಿಲ್ಲೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರನ್ನು ಗುರುತಿಸಿ ಸನ್ಮಾನಿಸಲಾಗುತ್ತಿದೆ.**



ಈ ಸಂದರ್ಭದಲ್ಲಿ ಯಾಳವಾರ ಗ್ರಾಮದ ಪ್ರತಿಭಾವಂತ ಚಿತ್ರಕಲಾವಿದ, ದೃಶ್ಯಬಿಂಬ ಕಲಾ ಪ್ರತಿಷ್ಠಾನ (ರಿ) ವಿಜಯಪುರದ ಅಧ್ಯಕ್ಷರಾದ ಸತೀಶ ಕೇಮಶೆಟ್ಟಿ ಅವರಿಗೆ "ಸಂಸ್ಕಾರ ರತ್ನ ಪ್ರಶಸ್ತಿ" ಪ್ರದಾನ ಮಾಡಲಾಗುತ್ತಿದೆ. ಕಾರ್ಯಕ್ರಮವು ದಿನಾಂಕ 13 ಮಾರ್ಚ್ 2026 ಶುಕ್ರವಾರ ಸಂಜೆ 5 ಗಂಟೆಗೆ ಯಾಳವಾರ ಗ್ರಾಮದ ಸಂಸ್ಕಾರಧಾಮ ಶಾಲೆಯ ಆವರಣದಲ್ಲಿ ನಡೆಯಲಿದೆ. ಕಾರ್ಯಕ್ರಮವನ್ನು ದೇವರಹಿಪ್ಪರಗಿ ವಿಧಾನಸಭಾ ಕ್ಷೇತ್ರದ ಶಾಸಕರಾದ ರಾಜುಗೌಡ ಭೀ. ಪಾಟೀಲ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ದೇವರಹಿಪ್ಪರಗಿ ಕ್ಷೇತ್ರದ ಮಾಜಿ ಶಾಸಕರಾದ ಸೋಮನಗೌಡ ಪಾಟೀಲ, ವಿಜಯಪುರದ ಅನುಗ್ರಹ ಆಸ್ಪತ್ರೆಯ ಖ್ಯಾತ ನೇತ್ರ ತಜ್ಞರಾದ ಡಾ.ಪ್ರಭುಗೌಡ ಲಿಂಗದಳ್ಳಿ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ. ಚಿತ್ರಕಲಾ ಕ್ಷೇತ್ರದಲ್ಲಿ ತಮ್ಮ ವಿಶೇಷ ಸಾಧನೆಗಳ ಮೂಲಕ ಗುರುತಿಸಿಕೊಂಡಿರುವ ಸತೀಶ ಕೇಮಶೆಟ್ಟಿ ಅವರು ಕಲಾ ಪ್ರಚಾರ ಹಾಗೂ ಯುವ ಪ್ರತಿಭೆಗಳ ಉತ್ತೇಜನಕ್ಕಾಗಿ ಕಾರ್ಯನಿರ್ವಹಿಸುತ್ತಿದ್ದು, ಅವರ ಸೇವೆಯನ್ನು ಗುರುತಿಸಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುತ್ತಿದೆ ಎಂದು ವಿಶ್ವಭಾರತಿ ವಿದ್ಯಾವರ್ಧಕ ಸಂಸ್ಥೆಯವರು ತಿಳಿಸಿದ್ದಾರೆ.

## ಅಸ್ಕಿ ಫೌಂಡೇಶನದಿಂದ ಇಫ್ತಾರ ಕೂಟ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪವಿತ್ರ ರಮಜಾನ ಮಾಸದ ಅಂಗವಾಗಿ ಅಸ್ಕಿ ಫೌಂಡೇಶನ್ ಅಭಿಮಾನಿ ಬಳಗದ ವತಿಯಿಂದ ಮುಸ್ಲಿಂ ಬಾಂಧವರಿಗಾಗಿ ನಾಳೆ (ಮಾ.13) ಶುಕ್ರವಾರದಂದು ಸೌಹಾರ್ದ ಇಫ್ತಾರ ಕೂಟವನ್ನು ಆಯೋಜಿಸಲಾಗಿದೆ.**



ಪಟ್ಟಣದ ಹಳೆ ತರಕಾರಿ ಮಾರುಕಟ್ಟೆ ಆವರಣದಲ್ಲಿ ಸಂಜೆ 5–30ಕ್ಕೆ ನಡೆಯಲಿರುವ ಈ ಸೌಹಾರ್ದ ಇಫ್ತಾರ ಕೂಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಫೌಂಡೇಶನ್ ಅಧ್ಯಕ್ಷ, ಕಾಂಗ್ರೆಸ್ ಮುಖಂಡ ಸಿ.ಬಿ.ಅಸ್ಕಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕನ್ನಡ ವಿಷಯವು ಕೇವಲ ಒಂದು ವಿಷಯವಷ್ಟೇ ಅಲ್ಲ; ಅದು ಭಾಷಾ ಜ್ಞಾನ,

## ಕನ್ನಡ ಜ್ಞಾನ ಸ್ಪರ್ಧಾತ್ಮಕ ಪರೀಕ್ಷೆಗಳ ಯಶಸ್ವಿಗೆ ದಾರಿ: ಎಂ.ಡಿ.ಚಿತ್ತರಗಿ.

ನೈಜ್ಯ ದೆಸೆ ನ್ಯೂಸ್

**ಸಾಹಿತ್ಯ ಅರಿವು ಹಾಗೂ ರಾಜ್ಯದ ಸಂಸ್ಕೃತಿಯ ಬಗ್ಗೆ ತಿಳುವಳಿಕೆ ಹೆಚ್ಚಿಸುವ ಪ್ರಮುಖ ಸಾಧನವಾಗಿದೆ. ಕಾರಣ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಾಗುವ ವಿದ್ಯಾರ್ಥಿಗಳು ಕನ್ನಡ ವಿಷಯವನ್ನು ಗಂಭೀರವಾಗಿ ಅಧ್ಯಯನ ಮಾಡುವುದು ಅತ್ಯಂತ ಮುಖ್ಯ ಇದರಿಂದ ಪರೀಕ್ಷೆಯಲ್ಲಿ ಯಶಸ್ಸು ಸಾಧ್ಯ ಎಂದು ಸಹಾಯಕ ಪ್ರಾಧ್ಯಾಪಕ ಎಂ.ಡಿ.ಚಿತ್ತರಗಿ ಅಭಿಪ್ರಾಯಪಟ್ಟರು.**

ಪಟ್ಟಣದ ಸರ್ಕಾರಿ ಪ್ರಥ–ಮ ದರ್ಜೆ ಕಾಲೇಜಿನಲ್ಲಿ ಕನ್ನಡ ವಿಭಾಗ ಮತ್ತು ಐಕ್ಯೂ ಎಸ್.ಸಿ ಘಟಕದ ವತಿಯಿಂದ ನಡೆದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಕನ್ನಡ ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸವನ್ನು ನೀಡಿ ಮಾತನಾಡುತ್ತಾ, ಕನ್ನಡ ವಿಷಯವನ್ನು ಅಧ್ಯಯನ ಮಾಡುವುದರಿಂದ ವಿದ್ಯಾರ್ಥಿಗಳ ಭಾಷಾ ಜ್ಞಾನ, ವ್ಯಾಕರಣದ ಅರಿವು ಮತ್ತು ಶಬ್ದ ಸಂಪತ್ತು ಹೆಚ್ಚುತ್ತದೆ. ಇದು ಪರೀಕ್ಷೆಗಳಲ್ಲಿ ಸರಿಯಾದ



ಉತ್ತರಗಳನ್ನು ಬರೆಯಲು ಸಹಾಯಕವಾಗುತ್ತದೆ. ಕನ್ನಡ ಸಾಹಿತ್ಯ ಮತ್ತು ಇತಿಹಾಸದ ಮೂಲಕ ನಮ್ಮ ರಾಜ್ಯದ ಸಂಸ್ಕೃತಿ, ಪರಂಪರೆ ಮತ್ತು ಮಹನೀಯರ ಕುರಿತು ತಿಳಿದು ಕೊಳ್ಳಬಹುದು.

ಇದು ವಿದ್ಯಾರ್ಥಿಗಳಲ್ಲಿ ದೇಶಭಕ್ತಿ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಹೆಚ್ಚಿಸುತ್ತದೆ. ರಾಜ್ಯ ಮಟ್ಟದ ಹಲವಾರು ಸರ್ಕಾರಿ ಉದ್ಯೋಗಗಳ ಪರೀಕ್ಷೆಗಳಲ್ಲಿ ಕನ್ನಡ ಭಾಷೆಯ ಜ್ಞಾನ ಕಡ್ಡಾಯವಾಗಿರುತ್ತದೆ. ಆದ್ದರಿಂದ ಕನ್ನಡದಲ್ಲಿ ಪಾರಂಗತತೆ ಹೊಂದಿರುವುದು ಬಹಳ ಮುಖ್ಯ. ಕನ್ನಡ ಸಾಹಿತ್ಯದ ಅಧ್ಯಯನದಿಂದ ಉತ್ತಮ ಚಿಂತನೆ, ನೈತಿಕ ಮೌಲ್ಯಗಳು ಮತ್ತು ಜೀವನದ ಪಾಠಗಳನ್ನು ಕಲಿಯಲು ಸಾಧ್ಯವಾಗುತ್ತದೆ. ಇದು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೆ ಸಹಕಾರಿಯಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಾ. ಕೆ.ಖಾದರ ಭಾಷರವರು ಮಾತನಾಡಿ, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕನ್ನಡದ ಮಹತ್ವ ಅಪಾರವಾಗಿದೆ. ವಿದ್ಯಾರ್ಥಿಗಳು ಕನ್ನಡವನ್ನು ಕೇವಲ ಒಂದು ವಿಷಯವಾಗಿ ಅಲ್ಲ, ಜ್ಞಾನ ಮತ್ತು ಸಂಸ್ಕೃತಿಯ ಸಂಪತ್ತಾಗಿ ಪರಿಗಣಿಸಿ ಅಧ್ಯಯನ ಮಾಡಬೇಕು.

ಕನ್ನಡ ಮೇಲೆ ಪ್ರೀತಿ ಮತ್ತು ಅಧ್ಯಯನ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಸಾಧಿಸಲು ಸಾಧ್ಯ ಎಂದು ಹೇಳಿದರು ಕನ್ನಡ ವಿಭಾಗದ ಮುಖ್ಯಸ್ಥ ಮೌಲಸಾಬ್ ಅವರು ಕಾರ್ಯಕ್ರಮದ ಉದ್ದೇಶದ ನುಡಿಗಳನ್ನು ಮತ್ತು ಎಂ.ಡಿ.ಚಿತ್ತರಗಿರವರ ಪರಿಚಯವನ್ನು ಮಾಡಿದರು. ಈ ಕಾರ್ಯಕ್ರಮದಲ್ಲಿ ಸಹಾಯಕ ಪ್ರಾಧ್ಯಾಪಕರಾದ ಡಾ.ಚನ್ನಬಸವ, ರಾಜೇಶ, ಹನುಮೇಶ, ಗಂಗಾಬಾಯಿ, ಉಪನ್ಯಾಸಕರಾದ ಮಹಾದೇವ, ನರಸಣ್ಣ, ತಿಮ್ಮಯ್ಯ, ಶಿವಶರಣಪ್ಪ, ನಾಗರಾಜ, ಬಸವರಾಜ, ರಾಕೇಶ ವಿದ್ಯಾರ್ಥಿ ಪ್ರತಿನಿಧಿ ಮಂಜಮ್ಮ ಉಪಸ್ಥಿತಿ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು. ಕು.ಸುಮಿತ್ರಾ ನಿರೂಪಣೆ ಕು.ಮಾಳಮ್ಮ ಸ್ವಾಗತ, ಕು.ನಾಗಲಕ್ಷ್ಮಿ ವಂದನಾರ್ಪಣೆ ನೆರವೇರಿಸಿದರು.

## ಇಫ್ತಾರ್ ಕೂಟದಲ್ಲಿ ಸೌಹಾರ್ದತೆ ಮತ್ತು ಸಹೋದರತ್ವದ ಸಂದೇಶ

ನೈಜ್ಯ ದೆಸೆ ನ್ಯೂಸ್

**ಮುದ್ದೇಬಿಹಾಳ: ಸಮಾಜದಲ್ಲಿ ಪರಸ್ಪರ ಗೌರವ, ಸಹೋದರತ್ವ ಹಾಗೂ ಮಾನವೀಯ ಮೌಲ್ಯಗಳನ್ನು ಬೆಳೆಸುವಲ್ಲಿ ಧರ್ಮಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಖ್ಯಾತ ಕನ್ನಡ ಭಾಷಣಕಾರ ಲಾಲ್ ಹುಸೇನ್ ಕಂಡಗಲ್ ಹೇಳಿದರು. ನಗರದ ಟಾಪ್ ಇನ್ ಟೌನ್ ಹಾಲ್‌ನಲ್ಲಿ ಜಮಾಅತ್–ಎ–ಇಸ್ಲಾಮಿ ಹಿಂದ್ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಇಫ್ತಾರ್ ಸೌಹಾರ್ದ ಕೂಟದಲ್ಲಿ ಮಾತನಾಡಿದ ಅವರು, ಇಸ್ಲಾಂ ಧರ್ಮವು ಐದು ಮೂಲ ಸ್ತಂಭಗಳ ಮೇಲೆ ಆಧಾರಿತವಾಗಿದ್ದು, ರಮಝಾನ್ ತಿಂಗಳಲ್ಲಿ ಆಚರಿಸುವ ಉಪವಾಸವು ಆತ್ಮಶುದ್ಧಿ, ಸಹನೆ ಮತ್ತು ಮಾನವೀಯತೆಯನ್ನು ಬೆಳೆಸುವ ಪವಿತ್ರ ಆಚರಣೆಯಾಗಿದೆ ಎಂದು ತಿಳಿಸಿದರು.**

ಸೂರ್ಯಾಸ್ತದ ನಂತರ ಉಪವಾಸ ಮು–ರಿಯುವ ಕ್ಷಣ ಅತ್ಯಂತ ಪವಿತ್ರವಾಗಿದ್ದು, ಅದು ದೇವರ ಕೃಪೆ ಪಡೆಯುವ ಸಮಯವೆಂದು ವಿವರಿಸಿದರು.





ಇಸ್ಲಾಂ ಮಾನವನಲ್ಲಿ ಉತ್ತಮ ನಡತೆ, ಸತ್ಯನಿಷ್ಠೆ ಹಾಗೂ ಪರಸ್ಪರ ಗೌರವದ ಮನೋಭಾವವನ್ನು ಬೆಳೆಸಲು ಪ್ರೇರೇಪಿಸುತ್ತದೆ. ಧರ್ಮದ ಹೆಸರಿನಲ್ಲಿ ದ್ವೇಷವನ್ನು ಹೆಚ್ಚಿಸುವುದಕ್ಕಿಂತ ಸಹಬಾಳ್ವೆ ಮತ್ತು ಶಾಂತಿಯ ಸಂದೇಶವನ್ನು ಹರಡುವುದು ಅಗತ್ಯ ಎಂದು ಅವರು ಹೇಳಿದರು. ಸಮಾಜದಲ್ಲಿ ಒಗ್ಗಟ್ಟು ಮತ್ತು ಪರಸ್ಪರ ಗೌರವ ಹೆಚ್ಚಿಸಲು ಇಂತಹ ಇಫ್ತಾರ್ ಸೌಹಾರ್ದ ಕೂಟಗಳು ಮಹತ್ವದ ಪಾತ್ರ ವಹಿಸುತ್ತವೆ ಎಂದರು. ವಿಶೇಷ ಅತಿಥಿಗಳಾಗಿ ಭಾಗವಹಿಸಿದ್ದ ಪ್ರೊ. ಪ್ರಕಾಶ ನರಗುಂದ ಹಾಗೂ ಮುದ್ದೇಬಿಹಾಳ ಸಿಪಿಐ ಮೊಹಮ್ಮದ್ ಫಸಿಹುದ್ದೀನ್ ಮಾತನಾಡಿ, ರಮಝಾನ್ ತಿಂಗಳಲ್ಲಿ ಮುಸ್ಲಿಮರು ದೀರ್ಘ ಸಮಯ ಉಪವಾಸದಿಂದಿದ್ದು ಸೂರ್ಯಾಸ್ತದ ನಂತರ ಇಫ್ತಾರ್ ಮಾಡುತ್ತಾರೆ.

ಇಸ್ಲಾಂನಲ್ಲಿ ರೋಜಾ ಅತ್ಯಂತ ಪ್ರಮುಖ ಇಬಾದತ್ ಆಗಿದ್ದು, ನಿಗದಿತ ವಯಸ್ಸಿನ ನಂತರ ಅದನ್ನು ಪಾಲಿಸುವುದು ಕಡ್ಡಾಯವಾಗಿದೆ ಎಂದು ಹೇಳಿದರು. ದೈನಂದಿನ ಜೀವನದಲ್ಲಿ ಸ್ವಚ್ಛತೆ, ಶಿಸ್ತು ಮತ್ತು ಪಾವಿತ್ರ್ಯ ಕಾಪಾಡಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ನಾಜಿಮ್ ಅಬ್ದುಲ್ ರಹ್ಮಾನ್ ನಾಸಿರ್ ಮಾತನಾಡಿ, ಪರಸ್ಪರ ಸಹಾಯ ಸಹಕಾರ ಮತ್ತು ಮಾನವೀಯತೆ ಇಸ್ಲಾಂನ ಪ್ರಮುಖ ಮೌಲ್ಯಗಳಾಗಿವೆ. ಪ್ರತಿಯೊಂದು ಧರ್ಮಕ್ಕೂ ಗೌರವ ನೀಡುವುದು ಸಮಾಜದ ಶಾಂತಿ ಮತ್ತು ಏಕತೆಗೆ ಅಗತ್ಯವಾಗಿದೆ ಎಂದು ಹೇಳಿದರು. ಉಪವಾಸದ ಆಚರಣೆ ಕೇವಲ ಇಸ್ಲಾಂದಲ್ಲಷ್ಟೇ ಅಲ್ಲದೆ ಹಲವು ಧರ್ಮಗಳಲ್ಲಿಯೂ ಕಂಡುಬರುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದ ಆರಂಭದಲ್ಲಿ ಜಮಾಅತ್–ಎ–ಇಸ್ಲಾಮಿ ನಾಜಿಮ್ ನೂರ್ ನಬಿ ನದಾಫ ಸ್ವಾಗತ ಭಾಷಣ ಮಾಡಿ, ಇಫ್ತಾರ್ ಕೂಟದ ಉದ್ದೇಶವನ್ನು ವಿವರಿಸಿದರು.

ದೇಶದ ಸಂಸ್ಕೃತಿಯಲ್ಲಿ ಸಹೋದರತ್ವ ಮತ್ತು ಸೌಹಾರ್ದತೆಯ ಪರಂಪರೆ ಇದೆ. ಅದನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಎಸ್‌ಐಒ ಅಧ್ಯಕ್ಷರು ಹಾಗೂ ಕಾರ್ಯಕರ್ತರು ಅತಿಥಿಗಳಿಗೆ ಇಫ್ತಾರ್ ಸೇವೆ ಸಲ್ಲಿಸಿದರು. ನಗರದಲ್ಲಿನ ಗಣ್ಯರಾದ ಮಹಬೂಬ್ ಮುಲ್ಲಾ, ಸಿ.ಬಿ. ಅಸ್ಕೀ, ಕಾಮರಾಜ್ ಬಿರಾದಾರ, ಎಂ.ಎಂ. ಬೆಲಗಲ್, ಅಮರೇಶ್ ಗೂಳಿ, ಪ್ರಭು ಕಡ್ಡಿ, ಅಶೋಕ್ ಕಾಮತ್, ಹಾಜಿ ಬಿ.ಎಚ್. ಸುತಾರ, ಎಂ.ಡಿ. ಜರತಾರಗರ್, ನ್ಯಾಯವಾದಿಗಳಾದ ಎಂ.ಎ. ಮುದ್ದೇಬಿಹಾಳ, ಅಬ್ದುಲ್ ಗಫೂರ್ ಮಕಾಂದಾರ, ಮೊಹಮ್ಮದ್ ಛಪ್ಪರಬಂದ್, ಮೊಹಮ್ಮದ್ ರಫೀಕ್ ಮಕಾಂದಾರ, ನೂರೈನ್ ಖಾನ್ ಸೇರಿದಂತೆ ಅನೇಕರು ಹಾಗೂ ಮಹಿಳೆಯರು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಮೊಹಮ್ಮದ್ ನಿಹಾಲ್ ಮುಲ್ಲಾ ನಿರೂಪಿಸಿ, ಕೊನೆಯಲ್ಲಿ ಧನ್ಯವಾದಗಳನ್ನು ಅರ್ಪಿಸಿದರು.

## ರಾಯಚೂರು ಗರ್ಭಕಂಠದ ಕ್ಯಾನ್ಸರ್ ಮುಕ್ತ ಜಿಲ್ಲೆಯಾಗಲಿ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಮಹಿಳೆಯರು ಎದುರಿಸುತ್ತಿರುವ ಗಂಭೀರ ಅನಾರೋಗ್ಯ ಸಮಸ್ಯೆಗಳಲ್ಲಿ ಗರ್ಭಕಂಠದ ಕ್ಯಾನ್ಸರ್ ಕೂಡ ಒಂದಾಗಿದೆ. ಮಹಿಳೆಯರು ಎಚ್‌ಪಿವಿ ಲಸಿಕೆ ಪಡೆಯುವ ಮೂಲಕ ಗರ್ಭಕಂಠದ ಕ್ಯಾನ್ಸರ್ ಮುಕ್ತ ಜಿಲ್ಲೆಯನ್ನಾಗಿಸಲು ಸಹಕರಿಸಬೇಕೆಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ ಅವರು ಹೇಳಿದರು.**

ಮಾರ್ಚ್ 11 ಬುಧವಾರ ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ 14 ವರ್ಷದ ಹೆಣ್ಣು ಮಕ್ಕಳಿಗೆ ಎಚ್‌ಪಿವಿ ಲಸಿಕೆ ವಿತ–ರಿಸುವ ಜಿಲ್ಲಾ ಮಟ್ಟದ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. 14 ವರ್ಷದ ಶಾಲಾ ಮಕ್ಕಳಿಗೆ ಸರ್ಕಾರದಿಂದ ಲಸಿಕೆ ನೀಡುವ ಈ ಅಭಿಯಾನವು 2 ಹಂತಗಳಲ್ಲಿ ನಡೆಯಲಿದೆ. ಹತ್ತಿರದ ಸರ್ಕಾರಿ ಆಸ್ಪತ್ರೆಗಳಲ್ಲಿ ಲಸಿಕೆಯನ್ನು ಪಡೆಯುವ ಮೂಲಕ ಗರ್ಭಕಂಠದ ಕ್ಯಾನ್ಸರ್ ದೂರ





ಮಾಡಬೇಕು. ಲಸಿಕೆ ತೆಗೆದುಕೊಳ್ಳಲು ಯಾವುದೇ ಭಯ, ಆತಂಕ ಪಡಬಾರದು.

ಜಿಲ್ಲೆಗೆ ನಿಗದಿಯಾದ ಗುರಿ ಸಾಧಿಸಲು ಸಹಕರಿಸಬೇಕು ಎಂದರು. ಈ ವೇಳೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ನಂದಿತಾ ಎಮ್.ಎನ್. ಅವರು ಮಾತನಾಡಿ, ಕೇಂದ್ರ ಸರ್ಕಾರದ ಆದೇಶದಂತೆ ಈ ಲಸಿಕಾ ಅಭಿಯಾನವನ್ನು ರಾಯಚೂರು ಜಿಲ್ಲೆಯಲ್ಲಿಯೂ ಹಮ್ಮಿಕೊಳ್ಳಲಾಗಿದೆ. ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ 14 ವರ್ಷದ ಸುಮಾರು 22 ಸಾವಿರ ಹುಡುಗಿಯರಿಗೆ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಈ ಲಸಿಕೆಯನ್ನು ಹಾಕಲಾಗುತ್ತದೆ. ಈ ಅಭಿಯಾನವು ಮೂರು ತಿಂಗಳು ನಡೆಯಲಿದ್ದು, 14 ವರ್ಷದ ಎಲ್ಲ ಬಾಲಕಿಯರು ಲಸಿಕೆ ಪಡೆದುಕೊಳ್ಳಬೇಕು. ಮಹಿಳೆಯರಲ್ಲಿ ಹೆಚ್ಚಾಗಿ ಗರ್ಭಕಂಠ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿದೆ.

ಈ ಕ್ಯಾನ್ಸರ್ ತಡೆಗೆ ಎಚ್‌ಪಿವಿ ಲಸಿಕೆ ಸಹಕಾರಿ ಎಂದರು. ಪೋಸ್ಟರ್ ಬಿಡುಗಡೆ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ತಾಲೂಕು ಆರೋಗ್ಯ ಇಲಾಖೆಯಿಂದ ಎಚ್‌ಪಿವಿ ಲಸಿಕೆ ಅಭಿಯಾನ–2026ರ ನಮ್ಮ ಹೆಣ್ಣುಮಕ್ಕಳ ಆರೋಗ್ಯ–ನಾಡಿನ ಸುಭದ್ರ ಭವಿಷ್ಯ, ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟಲು ಇಂದೇ ಹೆಜ್ಜೆ ಇಡಿ! ಎಂಬ ಪೋಸ್ಟರ್ ಅನ್ನು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ ಅವರು ಸೇ–



ರಿದಂತೆ ವಿವಿಧ ಗಣ್ಯರು ಬಿಡುಗಡೆ ಮಾಡಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಕೆ.ಡಿ.ಬಡಿಗೇರ, ರಾಯಚೂರು ತಾಲೂಕು ಆರೋಗ್ಯಾಧಿಕಾರಿ ಡಾ.ಅಮೃತ ಹುಕೇರಿ, ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಆಡಳಿತಾಧಿಕಾರಿ ಡಾ.ಪ್ರಜ್ವಲ್, ಮಕ್ಕಳ ತಜ್ಞರಾದ ಡಾ.ಇಮ್ರಾನ್, ಡಾ.ಅನುಷಾ, ಐಎಮ್‌ಎ ನ ಡಾ.ಶ್ರೀಲತಾ ಪಾಟೀಲ್, ಡಾ.ತೃಪ್ತಿ, ವೈದ್ಯರಾದ ಡಾ.ಗುಂಡಮ್ಮ, ಡಾ.ಸುನೀಲ್, ಡಾ.ಶ್ವೇತಾಂಬರಿ, ಡಾ.ಅಷ್ಫಾಕ್ ಹುಸೇನ್, ಡಿಹೆಚ್‌ಇಓ ಈಶ್ವರ ದಾಸಪ್ಪನವರ, ಶುಶ್ರೂಷಾಧಿಕಾರಿ ಸಲೋಮಿ, ಸಿಆರ್‌ಪಿ ಮಾರೆಪ್ಪ ಬಲ್ಲಟಗಿ, ಬಿಹೆಚ್‌ಇಓ ನಾಗರಾಜ್, ಸರೋಜಾ ಕೆ, ಮುಖ್ಯೋಪಾಧ್ಯಾಯರಾದ ಈರಮ್ಮ, ಕವಿತಾ, ಹಿರಿಯ ಆ ಸುರಕ್ಷಣಾಧಿಕಾರಿ ಸುರೇಶ್, ಈರಮ್ಮ, ವಿಜಯಾ ಸೇ–ರಿದಂತೆ ವಿವಿಧ ಶಾಲೆಯ ಮಕ್ಕಳು ಇದ್ದರು.


## ಮಹಿಳಾ ದಿನಾಚರಣೆ ಅಂಗವಾಗಿ ಕಸಾಪ ದತ್ತಿ ಉಪನ್ಯಾಸ ಮಾಲಿಕೆ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ರಾಯಚೂರು ಹಾಗೂ ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಘಟಕ ಸಿಂಧನೂರು ಇವರ ವತಿಯಿಂದ ಮಹಿಳಾ ದಿನಾಚರಣೆ ಅಂಗವಾಗಿ 2025?26ನೇ ಸಾಲಿನ ದತ್ತಿ ಉಪನ್ಯಾಸ ಮಾಲಿಕೆ ಕಾರ್ಯಕ್ರಮವು ಮಂಗಳವಾರ (ಮಾ.10) ರಂದು ಸಿಂಧನೂರಿನ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಆವರಣದಲ್ಲಿ ನಡೆಯಿತು.**

ಕಾರ್ಯಕ್ರಮವನ್ನು ಡಾ. ಮಾಂತಪ್ಪ ಕೊಡಗಲಿ, ಪ್ರಾಂಶುಪಾಲರು, ಸರ್ಕಾರಿ ಪ್ರಥ–ಮ ದರ್ಜೆ ಮಹಿಳಾ ಕಾಲೇಜು ಸಿಂಧನೂರು ಅವರು ಕನ್ನಡಾಂಬೆಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಉದ್ಘಾಟಿಸಿದರು. ವೇದಿಕೆಯಲ್ಲಿ ಉಪಸ್ಥಿತರಿದ್ದ ಗಣ್ಯರು ಕೂಡ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಕುಮಾರಿ ರಾಧೀಕ ನೆರವೇರಿಸಿದರು. ಸ್ವಾಗತವನ್ನು ಕುಮಾರಿ ಶಕುಂತಲಾ ನೆರವೇರಿಸಿ, ವೇದಿಕೆಯ ಅತಿಥಿಗಳಿಗೆ ಪುಷ್ಪಗುಚ್ಛ ಮತ್ತು ಹೆಗಲುಪಟ್ಟಿ ಹಾಕಿ ಗೌರವಿಸಿದರು.

ಪ್ರಾರ್ಥನಾ ಗೀತೆಯನ್ನು ಕುಮಾರಿ ಕಾವೇರಿ ಹಾಡಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ಉಪನ್ಯಾಸಕ



ಶ್ರೀ ವೀರೇಶ ನಾಯಕ ಕನ್ನಾರಿ ಅವರು ಕನ್ನಡ ಸಾಹಿತ್ಯ ಪರಿಷತ್ತು ರಾಜ್ಯಾದ್ಯಂತ ಸಾಹಿತ್ಯ ಚಟುವಟಿಕೆಗಳನ್ನು ಸಕ್ರಿಯವಾಗಿ ನಡೆಸಿಕೊಂಡು ಬರುತ್ತಿದ್ದು, ಕನ್ನಡ ಭಾಷೆ, ಸಾಹಿತ್ಯ, ನೆಲ–ಜಲದ ಅಭಿಮಾನವನ್ನು ಬೆಳೆಸುವುದು ಇದರ ಮುಖ್ಯ ಉದ್ದೇಶವಾಗಿದೆ ಎಂದು ಹೇಳಿದರು. ಉದ್ಘಾಟನಾ ನುಡಿಯಲ್ಲಿ ಪ್ರಾಂಶುಪಾಲರಾದ ಡಾ. ಮಾಂತಪ್ಪ ಕೊಡಗಲಿ ಅವರು ಮಹಿಳೆಯರ ಸಂವಿಧಾನಾತ್ಮಕ ಹಕ್ಕುಗಳ ಬಗ್ಗೆ ಜಾಗೃತಿ ಅಭಿಯಾನಗಳು ನಡೆಯಬೇಕು. ಶಿಕ್ಷಣ, ಸಾಹಿತ್ಯ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಮಹಿಳೆಯರು ಹೆಚ್ಚು ಗುರುತಿಸಿಕೊಳ್ಳಬೇಕು. ಸಮಾಜ ನಿರ್ಮಾಣದಲ್ಲಿ ಮಹಿಳೆಯರ ಪಾತ್ರ ಮಹತ್ತರವಾಗಿದೆ ಎಂದು ತಿಳಿಸಿದರು.

ವಿಶೇಷ ಉಪನ್ಯಾಸದಲ್ಲಿ ಹಿರಿಯ ವಕೀಲರಾದ ಶ್ರೀಮತಿ ಸಹನಾ ಹಿರೇಮಠ ಮಾತನಾಡಿ, ಕುಟುಂಬ ಹಾಗೂ ಸಮಾಜದಲ್ಲಿ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳ ವಿರುದ್ಧ ಮಹಿಳೆಯರು ಜಾಗೃತರಾಗಬೇಕು. ಮಹಿಳಾ ಕಾಯಿದೆಗಳು ಮತ್ತು ಸಂವಿಧಾನಾತ್ಮಕ ಹಕ್ಕುಗಳ ಬಗ್ಗೆ ತಿಳಿದು ಸಮಾನತೆಗಾಗಿ ಹೋರಾಡಬೇಕು ಎಂದು ಕರೆ ನೀಡಿದರು. ಉಪನ್ಯಾಸಕಿ ಡಾ. ವಿಜಯಲಕ್ಷ್ಮಿ ಮಾತನಾಡಿ, ತಾಯಿ ಸಮಾಜದ ಯಜಮಾನಿಯಾಗಿದ್ದು, ಕರುಣೆ ಮತ್ತು ಸಹಿಷ್ಣುತೆಯ ಪ್ರತಿರೂಪವಾಗಿದೆ. ಇಂದಿನ ಕಾಲದಲ್ಲಿ ಮಹಿಳೆಯರು ಅನೇಕ ಕ್ಷೇತ್ರಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಸುಸಂಸ್ಕೃತ ಸಮಾಜ ನಿರ್ಮಾಣದಲ್ಲಿ ತಾಯಿಯ ಪಾತ್ರ ಅತ್ಯಂತ ಮಹತ್ತರವಾಗಿದೆ ಎಂದು ಹೇಳಿದರು. ದತ್ತಿದಾನಿಗಳ ಪರಿಚಯವನ್ನು ಉಪನ್ಯಾಸಕರಾದ ಹೆಚ್.ಎಂ. ಶ್ರೀಶೈಲ ಅವರು ಮಾಡಿದರು. ದಿವಂಗತ ದತ್ತಿದಾನಿಗಳಾದ ಶ್ರೀಮತಿ ನಿಂಗವ್ವ ಭೀಮಪ್ಪ ಗುಡ್ಲಾಮನಿ, ಶ್ರೀಮತಿ ಸರಗುಣಮ್ಮ ಸೋಮನಗೌಡ, ಚನ್ನಬಸಯ್ಯ ಸ್ವಾಮಿ ಹಿರೇಮಠ, ಶ್ರೀಮತಿ ಕ–ರಿಬಸಮ್ಮ ಶಿವಲಿಂಗಯ್ಯ ಹಾಗೂ ಶ್ರೀಮತಿ ಎನ್ನಮನಿ ಪ್ರಭಾವತಿ ಸುಬ್ಬರಾವ್ ಅವರನ್ನು ಸ್ಮರಿಸಿ, ಅವರ ಸಮಾಜ ಸೇವೆ ಮತ್ತು ಕೊಡುಗೆಗಳನ್ನು ನೆನಪಿಸಿದರು. ದತ್ತಿದಾನಿಯಾಗಿ ಮಾತನಾಡಿದ ಕಸಾಪ ಜಿಲ್ಲಾ ಪ್ರತಿನಿಧಿ ಶ್ರೀಮತಿ ರಮಾದೇವಿ ಬೀರಪ್ಪ ಶಂಭೋಜಿ ಅವರು ಮಹಿಳಾ ದಿನಾಚರಣೆ ಕೇವಲ ಆಚರಣೆ ಮಾತ್ರವಾಗದೆ,

ಮಹಿಳೆಯರ ಮೇಲೆ ನಡೆಯುವ ಶೋಷಣೆಗಳನ್ನು ತಡೆಗಟ್ಟುವ ಜಾಗೃತಿ ಮೂಡಬೇಕು. ಮಹಿಳೆ ಪುರುಷನಷ್ಟೇ ಸಮಾನಳಾಗಿದ್ದು, ಎಲ್ಲಾ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿದ್ದಾಳೆ ಎಂದು ಹೇಳಿದರು. ಕಸಾಪ ಜಿಲ್ಲಾ ಪ್ರತಿನಿಧಿ ಎಸ್. ದೇವೇಂದ್ರಗೌಡ ಮಾತನಾಡಿ, ಸ್ತ್ರೀ?ಪುರುಷರ ನಡುವಿನ ಸಂಬಂಧ ಪ್ರೀತಿ, ವಾತ್ಸಲ್ಯ ಮತ್ತು ಪರಸ್ಪರ ಗೌರವದ ಮೇಲೆ ಆಧಾರಿತವಾಗಿರಬೇಕು ಎಂದು ತಿಳಿಸಿದರು. ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷರಾದ ಯನ್ನಮನಿ ನರೇಂನಾಥ ಮಾತನಾಡಿ, ಕುಟುಂಬ ಹಾಗೂ ಸಮಾಜ ನಿರ್ಮಾಣದಲ್ಲಿ ಮಹಿಳೆಯರ ಕರ್ತವ್ಯ ಮತ್ತು ಪಾತ್ರಗಳು ಮಹತ್ವದ್ದಾಗಿದ್ದು, ಅವುಗಳನ್ನು ಜವಾಬ್ದಾ–ರಿಯುತವಾಗಿ ನಿರ್ವಹಿಸಬೇಕು ಎಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಹೆಚ್.ಎಫ್. ಮಸ್ಕಿ ಅವರು ಸಮಾಜದಲ್ಲಿ ಮಹಿಳೆಯರ ನೈತಿ–ಕ ಮೌಲ್ಯಗಳು ಮತ್ತು ಆದರ್ಶಗಳನ್ನು ಉಳಿಸಿ ಬೆಳೆಸಲು ಎಲ್ಲರೂ ಕೈಜೋಡಿಸಬೇಕು.

ಕನ್ನಡ ಸಾಹಿತ್ಯದ ಬೆಳವಣಿಗೆಗೆ ಮಹಿಳೆಯರು ಆಸಕ್ತಿ ತೋರಬೇಕು ಮತ್ತು ಲಿಂಗಭೇದವಿಲ್ಲದೆ ಸಮಾನತೆ ಸಾಧಿಸಬೇಕು ಎಂದು ಸಲಹೆ ನೀಡಿದರು. ಈ ಸಂದರ್ಭದಲ್ಲಿ ಎಸ್.ಎಸ್. ಹಿರೇಮಠ (ವಿಶ್ರಾಂತ ಡಿ.ಡಿ.ಪಿ.ಯು ಅಧಿಕಾರಿಗಳು), ಸರಸ್ವತಿ ಪಾಟೀಲ್ (ಮಾಜಿ ಅಧ್ಯಕ್ಷರು ಕಸಾಪ), ಪಿ. ಶ್ರೀದೇವಿ ಶ್ರೀನಿವಾಸ್, ಸುಮಂಗಲ ಚಿಂಚರಕಿ, ಶೈಲಜಾ ಷಡಕ್ಷರಯ್ಯ, ಶಾಂತಾಬಾಯಿ, ಶೋಭಾ, ಶಂಕರ್ ವಾಲೇಕರ್, ಶಿವಮೂರ್ತಿ ಹಿರೇಮಠ, ಉಮಾಶಂಕರ್, ಡಾ. ಬಸವರಾಜ್ ನಾಯಕ್, ವನ್ನೂರು ಕಟ್ಟಿಮನಿ ಸೇ–ರಿದಂತೆ ಕಾಲೇಜಿನ ಬೋಧಕ ಸಿಬ್ಬಂದಿ, ಕಸಾಪ ಪದಾಧಿಕಾರಿಗಳು ಹಾಗೂ ಪತ್ರಿಕಾ ಮತ್ತು ಸಮೂಹ ಮಾಧ್ಯಮದ ಪ್ರತಿನಿಧಿಗಳು ಉಪಸ್ಥಿತರಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ


### ಮೈನಿಂಗ್ ಇಂಜಿನಿಯರಿಂಗ್

ಮೈನಿಂಗ್ ಇಂಜಿನಿಯರಿಂಗ್ (ಗಣಿಗಾರಿಕೆ ಇಂಜಿನಿಯರಿಂಗ್) ನೆಲದಿಂದ ಖನಿಜಗಳು, ಲೋಹಗಳು ಮತ್ತು ಇಂಧನಗಳನ್ನು ಸುರಕ್ಷಿತವಾಗಿ ಹೊರತೆಗೆಯುವ ಮತ್ತು ಸಂಸ್ಕರಿಸುವ ತಂತ್ರಜ್ಞಾನವಾಗಿದೆ. ಗಣಿಗಾರಿಕೆ ಎಂಜಿನಿಯರಿಂಗ್ ಒಂದು ಎಂಜಿನಿಯರಿಂಗ್ ವಿಭಾಗವಾಗಿದ್ದು ಇದು ನೈಸರ್ಗಿಕ ಪರಿಸರದಿಂದ ಖನಿಜಗಳನ್ನು ಹೊರತೆಗೆಯುವ ಮತ್ತು ಸಂಸ್ಕರಿಸುವ ವಿಜ್ಞಾನ, ತಂತ್ರಜ್ಞಾನ ಮತ್ತು ಅನ್ವಯವನ್ನು ಒಳಗೊಂಡಿದೆ. ಗಣಿಗಾರಿಕೆ ಎಂಜಿನಿಯರಿಂಗ್ ಸಂಸ್ಕರಣೆ ಮತ್ತು ಬಳಕೆಗಾಗಿ ನೆಲದಿಂದ ಅಮೂಲ್ಯವಾದ ಅದಿರುಗಳನ್ನು ಹೊರತೆಗೆಯುವುದನ್ನು ಒಳಗೊಂಡಿದೆ. ಇದು ಪರಿಶೋಧನೆ ಮತ್ತು ಅನ್ವೇಷಣೆ, ಕಾರ್ಯಸಾಧ್ಯತಾ ಅಭಿವೃದ್ಧಿ, ಉತ್ಪಾದನೆ, ಸಂಸ್ಕರಣೆ ಮತ್ತು ಮಾರುಕಟ್ಟೆಯಿಂದ ಪ್ರಾರಂಭವಾಗುವ ಗಣಿಗಾರಿಕೆ ಕಾರ್ಯಾಚರಣೆಗಳ ಎಲ್ಲಾ ಹಂತಗಳನ್ನು ಒಳಗೊಂಡಿದೆ . ಇದು 4 ವರ್ಷಗಳ ಬಿಇ/ಬಿ.ಟೆಕ್ ಕೋರ್ಸ್ ಆಗಿದ್ದು, ಗಣಿ ವಿನ್ಯಾಸ, ಭೂವಿಜ್ಞಾನ, ಮತ್ತು ಸ್ಫೋಟ ತಂತ್ರಗಳ ಬಗ್ಗೆ ಕಲಿಸುತ್ತದೆ. ಪ್ರವೇಶಕ್ಕೆ ದ್ವಿತೀಯ ಪಿಯುಸಿಯಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಗಣಿತ ಕಡ್ಡಾಯ, ಜೊತೆಗೆ ಪ್ರವೇಶ ಪರೀಕ್ಷೆಗಳಾದ JEE Main ಅಥವಾ GATE ಅಗತ್ಯ. ಕೋರ್ಸ್ ಮುಖ್ಯಾಂಶಗಳು: ಅರ್ಹತೆ: ಪಿಯುಸಿ (10+2) ವಿಜ್ಞಾನ ವಿಭಾಗ (PCM) ಅಥವಾ ಡಿಪ್ಲೊಮಾ ಇನ್ ಮೈನಿಂಗ್. ಅವಧಿ: 4 ವರ್ಷಗಳು (ಬಿಇ/ಬಿ.ಟೆಕ್). ಪ್ರಮುಖ ವಿಷಯಗಳು: ಭೂಗತ ಗಣಿಗಾರಿಕೆ, ಮೇಲ್ಮೈ ಗಣಿಗಾರಿಕೆ, ಖನಿಜ ಸಂಸ್ಕರಣೆ, ಗಣಿ ಸಮೀಕ್ಷೆ (Surveying), ಮತ್ತು ಗಣಿ ಕಾನೂನುಗಳು. ಕೆಲಸದ ಅವಕಾಶಗಳು: ಮೈನಿಂಗ್ ಇಂಜಿನಿಯರ್, ಮೈನ್ ಪ್ಲಾನರ್, ಜಿಯೋಟೆಕ್ನಿಕಲ್ ಇಂಜಿನಿಯರ್, ಮತ್ತು ಸುರಕ್ಷತಾ ಅಧಿಕಾರಿ. ಉದ್ಯೋಗದಾತರು: Coal India, NMDC, Vedanta, Tata Steel, ಮತ್ತು ವಿವಿಧ ಸರ್ಕಾರಿ/ಖಾಸಗಿ ಗಣಿ ಕಂಪನಿಗಳು. ಕೋರ್ಸ್ ಒಳಗೊಂಡಿರುವ ಪ್ರಮುಖ ಕ್ಷೇತ್ರಗಳು: ಅನ್ವೇಷಣೆ (Exploration): ಖನಿಜಗಳ ಪತ್ತೆ. ವಿನ್ಯಾಸ (Design): ಗಣಿಗಾರಿಕೆಯ ಹಾದಿ ಮತ್ತು ಸುರಕ್ಷತಾ ಯೋಜನೆ. ಉತ್ಪಾದನೆ (Production): ಅದಿರುಗಳನ್ನು ತೆಗೆಯುವುದು.

## ಹಾಲಾಪೂರ: ಶಾಲಾ ಭೂದಾನಿ ದಿ.ಬಸವರಾಜಪ್ಪಗೌಡರ 9ನೇ ವರ್ಷದ ಪುಣ್ಯಸ್ಮರಣೆ

ನೈಜ್ಯ ದೆಸೆ ನ್ಯೂಸ್

**ಹಾಲಾಪೂರ: ಗ್ರಾಮದಲ್ಲಿರುವ ಸರಕಾರಿ ಪ್ರೌಢ ಶಾಲೆಯ ಭೂದಾನಿಗಳಾದ ದಿವಂಗತ ಬಸವರಾಜಪ್ಪಗೌಡ ರವರ 9ನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಯಿತು.**



ದೈಹಿಕ ಶಿಕ್ಷಕರಾದ ರವೀಂದ್ರ ಕುಂಬಾರ ರವರು ಮಾತನಾಡಿ ನಮ್ಮ ಶಾಲೆಯ ಭೂದಾನಿಗಳಾದ ದಿವಂಗತ ಬಸವರಾಜಪ್ಪಗೌಡ ರವರು ಆರು ಎಕರೆ ವಿಶಾಲವಾಗಿರುವ ಭೂಮಿಯನ್ನ ಭೂದಾನ ಮಾಡಿ ಸಾವಿರಾರು ವಿದ್ಯಾರ್ಥಿಗಳಿಗೆ ಅಕ್ಷರ, ಉದ್ಯೋಗ, ಜ್ಞಾನ ಕರುಣಿಸಿದ ಮಹಾನ್ ಪುರುಷರು ಅವರ ಸೇವೆ ಸಮಾಜಕ್ಕೆ ಅತ್ಯಂತ ಮಹತ್ವದ್ದು, ನಮ್ಮ ಶಾಲೆಯ ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆದು ಜೀವನದಲ್ಲಿ ಒಳ್ಳೆಯ ಹುದ್ದೆ ಹೊಂದಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ಶಿಕ್ಷಕರಾದ ಆದೇಶಪ್ಪ, ಬಾಬುರಾವ್, ಯಮನಪ್ಪ, ಕೃಷ್ಣಮೂರ್ತಿ, ಕಿರಣಕುಮಾರ್ ಹಾಗೂ ಶಿಕ್ಷಕಿಯರು, ವಿದ್ಯಾರ್ಥಿಗಳು ಇದ್ದರು.

## ಅಭಿನಂದನ್ ಸ್ಫೂರ್ತಿ ಧಾಮದ ಮಕ್ಕಳಿಗಾಗಿ ಒಂದು ಕ್ವಿಂಟಲ್ ಅಕ್ಕಿ ದಾನ ಮಾಡಿದ ರೈತ ಮಹಿಳೆ ಕವಿತಾ ಮಿಶ್ರಾ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಮಾನವೀಯತೆ ಮತ್ತು ಸಮಾಜ ಸೇವೆಯ ಅತ್ಯುತ್ತಮ ಉದಾಹರಣೆಯಾಗಿ ಸಿರವಾರ ತಾಲೂಕಿನ ಕವಿತಾಳ ಪಟ್ಟಣದ ರೈತ ಮಹಿಳೆ ಶ್ರೀಮತಿ ಕವಿತಾ ಮಿಶ್ರಾ ಅವರು ಅಭಿನಂದನ್ ಸ್ಫೂರ್ತಿ ಧಾಮ ಮಸ್ಕಿಯ ಮಕ್ಕಳಿಗಾಗಿ ಒಂದು ಕ್ವಿಂಟಲ್ ಅಕ್ಕಿಯನ್ನು ದಾನವಾಗಿ ನೀಡಿ ತಮ್ಮ ದಾನಶೀಲತೆಯನ್ನು ತೋರಿಸಿದ್ದಾರೆ.**

ಮಸ್ಕಿ ತಾಲೂಕಿನಲ್ಲಿರುವ ಅಭಿನಂದನ್ ಸ್ಫೂರ್ತಿ ಧಾಮ ಅನಾಥ ಮತ್ತು ಆಶ್ರಯವಿಲ್ಲದ ಮಕ್ಕಳಿಗೆ ಆಶ್ರಯವಾಗಿದ್ದು, ಇಲ್ಲಿ ನೂರಾರು ಮಕ್ಕಳನ್ನು ತಮ್ಮ ಮಕ್ಕಳಂತೆ ಸಾಕಿ ಬೆಳೆಸುವ ಮಹತ್ತರ ಕಾರ್ಯವನ್ನು ಶ್ರೀಮತಿ ಶ್ರುತಿ ಹಂಪರಗುಂದಿ ಹಾಗೂ ಶ್ರೀ ರಾಮಣ್ಣ ಹಂಪರಗುಂದಿ ದಂಪತಿಗಳು ಮಾಡುತ್ತಿದ್ದಾರೆ. ಮಕ್ಕಳಾಗಲಿಲ್ಲ ಎಂಬ ವೈಯಕ್ತಿಕ ಕೊರಗನ್ನು ಸಮಾಜ ಸೇವೆಯ ಮೂಲಕ ನೀಗಿಸಬೇಕು ಎಂಬ ಉದ್ದೇಶದಿಂದ ಈ ದಂಪತಿಗಳು ಹಲವಾರು ವರ್ಷಗಳಿಂದ ಅನೇಕ ಮಕ್ಕಳಿಗೆ ಆಶ್ರಯ, ಆಹಾರ, ಶಿಕ್ಷಣ ಮತ್ತು ಉತ್ತಮ



ಭವಿಷ್ಯ ಒದಗಿಸಲು ಶ್ರಮಿಸುತ್ತಿದ್ದಾರೆ.

ಅವರ ಈ ಸೇವಾಭಾವವನ್ನು ಗುರುತಿಸಿ ರೈತ ಮಹಿಳೆ ಕವಿತಾ ಮಿಶ್ರಾ ಅವರು ಸ್ವತಃ ಶ್ರುತಿ ರಾಮಣ್ಣ ಹಂಪರಗುಂದಿ ಅವರಿಗೆ ಕರೆ ಮಾಡಿ ನೀವು ಮಾಡುವ ಸಮಾಜ ಸೇವೆ ಅತ್ಯಂತ ಮಹತ್ತರವಾದುದು ನನ್ನ



ಕಡೆಯಿಂದ ಚಿಕ್ಕ ಅಳಿಲು ಸೇವೆ ಎಂದು ಒಂದು ಕ್ವಿಂಟಲ್ ಅಕ್ಕಿಯನ್ನು ದಾನವಾಗಿ ನೀಡಿದ್ದಾರೆ.ಈ ಸಂದರ್ಭದಲ್ಲಿ ಮಾತನಾಡಿದ ಶ್ರುತಿ ರಾಮಣ್ಣ ಹಂಪರಗುಂದಿ ಅವರು, "ಸಮಾಜದಲ್ಲಿ ಇನ್ನೂ ಸಹ ಮಾನವೀಯತೆ ಜೀವಂತವಾಗಿದೆ ಎಂಬುದಕ್ಕೆ ರೈತ ಮಹಿಳೆ ಕವಿತಾ ಮಿಶ್ರಾ ಅವರ ದಾನವೇ ದೊಡ್ಡ ಉದಾಹರಣೆ.ಅವರ ಈ ಸಹಾಯದಿಂದ ಇಲ್ಲಿ ಇರುವ ಮಕ್ಕಳಿಗೆ ಬಹಳ ಉಪಕಾರವಾಗಿದೆ.

ಅವರಂತಹ ದಾನಿಗಳ ಸಹಕಾರದಿಂದಲೇ ನಮ್ಮ ಸಂಸ್ಥೆ ನೂರಾರು ಮಕ್ಕಳನ್ನು ಉತ್ತಮವಾಗಿ ನೋಡಿಕೊಳ್ಳಲು ಸಾಧ್ಯವಾಗುತ್ತಿದೆ" ಎಂದು ಕೃತಜ್ಞತೆ ವ್ಯಕ್ತಪಡಿಸಿದರು. ಇದಲ್ಲದೆ ಕವಿತಾ ಮಿಶ್ರಾ ಅವರ ದಾನಶೀಲತೆ, ಸಮಾಜದ ಬಗ್ಗೆ ಇರುವ ಕಾಳಜಿ ಮತ್ತು ಮಕ್ಕಳ ಮೇಲಿನ ಪ್ರೀತಿ ಶ್ಲಾಘನೀಯವಾಗಿದೆ ಎಂದು ಅವರು ತಿಳಿಸಿದ್ದಾರೆ. ಅಭಿನಂದನ್ ಸ್ಫೂರ್ತಿ ಧಾಮದ ಪರವಾಗಿ ಕವಿತಾ ಮಿಶ್ರಾ ಅವರಿಗೆ ಅನಂತ ಕೋಟಿ ಧನ್ಯವಾದಗಳು ಮತ್ತು ಅಭಿನಂದನೆಗಳನ್ನು ಅರ್ಪಿಸಿದರು.

ಸಮಾಜದ ಪ್ರತಿಯೊಬ್ಬರೂ ಸಾಧ್ಯವಾದಷ್ಟು ಸಹಾಯ ಮಾಡಬೇಕು ಎಂಬ ಸಂದೇಶವನ್ನು ಈ ಕಾರ್ಯ ನೀಡುತ್ತದೆ ಎಂದು ಸಂಸ್ಥೆಯವರು ತಿಳಿಸಿದ್ದಾರೆ. ತಾವು ಕೂಡ ಏನಾದರೂ ದಾನ ಮಾಡಲು ಬಯಸಿದರೆ ಹಾಗೂ ಇವರು ಮಕ್ಕಳ ಸ್ವಂತ ಕಟ್ಟಡಕ್ಕಾಗಿ ಹಣ ಸಂಗ್ರಹ ಮಾಡುತ್ತಿದ್ದಾರೆ ದಾನಿಗಳು ಮಕ್ಕಳಿಗಾಗಿ ಹಣ ಕೂಡ ದಾನಮಾಡಬಹುದು ಈ ನಂಬರ್ ಗೆ ಕರೆ ಮಾಡಿ 9986116589

## ಅಂಗನವಾಡಿ ಕಾರ್ಯಕರ್ತೆ, ಸಹಾಯಕಿ ಹುದ್ದೆಗೆ ಅರ್ಜಿ ಆಹ್ವಾನ



ನೈಜ್ಯ ದೆಸೆ ನ್ಯೂಸ್

**ರಾಯಚೂರು: ಇಲ್ಲಿನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ 2022-23 ಮತ್ತು 2023-24ನೇ ಸಾಲಿಗೆ ಜಿಲ್ಲೆಯ ಸಿರವಾರ ತಾಲ್ಲೂಕಿನ ಅಂಗನವಾಡಿ ಕೇಂದ್ರ ಸಂಖ್ಯೆ 12 ಹಾಗೂ ಅತ್ತನೂರು ಅಂಗನವಾಡಿ ಕೇಂದ್ರ ಸಂಖ್ಯೆ 5ರಲ್ಲಿ ಅಂಗನವಾಡಿ ಕಂ ಕ್ರಷ್ ಕೇಂದ್ರಗಳ ಕಾರ್ಯಕರ್ತೆ ಮತ್ತು ಸಹಾಯಕಿ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.**

ಕಾರ್ಯಕರ್ತೆ ಹುದ್ದೆಗೆ 5.500 ರೂ. ಮತ್ತು ಸಹಾಯಕಿ ಹುದ್ದೆಗೆ 3,000 ರೂ. ಗೌರವಧನ ನೀಡಲಾಗುವುದು. ಆಸಕ್ತ ಅಭ್ಯರ್ಥಿಗಳು ಸ್ಥಳೀಯ ಅಂಗನವಾಡಿ ಕಂ ಕ್ರಷ್ ಕೇಂದ್ರದ ಸರ್ವೆ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಸಂಬಂಧಪಟ್ಟ ಅಂಗನವಾಡಿ ಕೇಂದ್ರದ ವ್ಯಾಪ್ತಿಯ ಅಂಗನವಾಡಿ ಕಾರ್ಯಕರ್ತೆಯಿಂದ ಸರ್ವೆ ವ್ಯಾಪ್ತಿಯಲ್ಲಿರುವ ಬಗ್ಗೆ ದೃಢೀಕರಣ ಪಡೆದು ಸಲ್ಲಿಸಬೇಕು. ಅಭ್ಯರ್ಥಿಯು ಮಹಿಳೆ ಆಗಿರಬೇಕು. ಕರ್ನಾಟಕ ರಾಜ್ಯ ಪದವಿ ಪೂರ್ವ ಶಿಕ್ಷಣ ಇಲಾಖೆಯ ದ್ವಿತೀಯ ಪಿಯುಸಿಯಲ್ಲಿ ತೇರ್ಗಡೆ ಆಗಿರಬೇಕು. ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು.

ಈ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿ ಲಭ್ಯವಿಲ್ಲದಿದ್ದಲ್ಲಿ ಕರ್ನಾಟಕ ರಾಜ್ಯ ಪ್ರೌಢ ಶಿಕ್ಷಣ ಪರೀಕ್ಷ ಮಂಡಳಿ ನಡೆಸುವ 10 ನೇ ತರಗತಿಯಲ್ಲಿ ತೇರ್ಗಡೆ ಆಗಿರುವವರನ್ನು ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರುವವರನ್ನು ಪರಿಗಣಿಸಬಹುದಾಗಿದೆ. ವಯೋಮಿತಿ, ಅರ್ಜಿ ಸಲ್ಲಿಸಲು ನೇಮಕಾತಿ ಅಧಿಸೂಚನೆ ಹೊರಡಿಸಿದ ದಿನಾಂಕಕ್ಕೆ ಕನಿಷ್ಠ 18 ವರ್ಷ ಪೂರ್ಣಗೊಂಡಿರಬೇಕು. ಮತ್ತು ಗರಿಷ್ಠ 35 ವರ್ಷ ಮೀರಿರಬಾರದು. ವಿಧವೆಯರು ಮತ್ತು ಅಂಗವಿಕಲರಿಗೆ 10 ವರ್ಷ ವಯೋಮಿತಿಯಲ್ಲಿ ರಿಯಾಯಿತಿ ಇರುತ್ತದೆ. ಅಭ್ಯರ್ಥಿಯು 10ನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ಅಥವಾ ಕನ್ನಡವನ್ನು ಒಂದು ಭಾಷಾ ವಿಷಯವಾಗಿ ಓದಿರಬೇಕು.

ಅಪೇಕ್ಷಿತ ವಿದ್ಯಾರ್ಹತೆ: ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ 6 ತಿಂಗಳಿಂದ 6 ವರ್ಷದ ಮಕ್ಕಳ ಪೋಷಣೆ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ ಕನಿಷ್ಠ 6 ತಿಂಗಳ ಅವಧಿಯ ವಿಷಯವನ್ನು ಅಥವಾ ತರಬೇತಿ ಪಡೆದಿರಬೇಕು. ಆಸಕ್ತರು ಮಾರ್ಚ್ 30ರೊಳಗಾಗಿ ಅರ್ಜಿಯನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ ಸಿರವಾರದಲ್ಲಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಸಿರವಾರ ಇವರನ್ನು ಕಚೇರಿ ವೇಳೆಯಲ್ಲಿ ಭೇಟಿ ನೀಡಬಹುದಾಗಿದೆ ಅಥವಾ ಮೊಬೈಲ್ ಸಂಖ್ಯೆ: 7619281523ಗೆ ಸಂಪರ್ಕ ಮಾಡಿ ಮಾಹಿತಿ ಪಡೆಯಬಹುದಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಾಗರಬೆಟ್ಟ ಏತ ನೀರಾವರಿ ಯೋಜನೆ ಪೂರ್ಣಗೊಳಿಸಲು ಮನವಿ

ನೈಜ್ಯ ದೆಸೆ ನ್ಯೂಸ್

**ಮುದ್ದೇಬಿಹಾಳ: ತಾಲೂಕಿನ ಬಹು ನಿರೀಕ್ಷಿತ ನಾಗರಬೆಟ್ಟ ಏತ ನೀರಾವರಿ ಯೋಜನೆಯ ಪೂರ್ವ ಕಾಲುವೆ ಕಾಮಗಾರಿ ಹಲವು ವರ್ಷಗಳಿಂದ ಅಪೂರ್ಣವಾಗಿರುವ ಹಿನ್ನೆಲೆಯಲ್ಲಿ ಅದನ್ನು ಶೀಘ್ರದಲ್ಲಿ ಪೂರ್ಣಗೊಳಿಸಿ ರೈತರಿಗೆ ನೀರಾವರಿ ಸೌಲಭ್ಯ ಒದಗಿಸಬೇಕೆಂದು ಆಗ್ರಹಿಸಿ ಯುವಜನ ಸೇನೆ ರಾಜ್ಯಾಧ್ಯಕ್ಷ ಶಿವಾನಂದ ಎಸ್. ವಾಲಿ ಅವರು ಕೃಷ್ಣ ಭಾಗ್ಯ ಜಲ ನಿಗಮದ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಮನವಿ ಸಲ್ಲಿಸಿದರು.**

ಈ ಸಂದರ್ಭದಲ್ಲಿ ಮಾತನಾಡಿದ ಅವರು, ನಾಗರಬೆಟ್ಟ ಏತ ನೀರಾವರಿ ಯೋಜನೆ 2021ರಲ್ಲಿ ಅಧಿಕೃತವಾಗಿ ಪ್ರಾರಂಭವಾಗಿದ್ದರೂ ಹಲವು ವರ್ಷಗಳಾದರೂ ಯೋಜನೆಯ ಪೂರ್ಣ ಪ್ರಮಾಣದ ಕಾಮಗಾರಿ ಇನ್ನೂ ಮುಗಿದಿಲ್ಲ ಎಂದು ಹೇಳಿದರು.



ಯೋಜನೆಯ ಪೂರ್ವ ಕಾಲುವೆ ಸುಮಾರು 12 ಕಿಲೋಮೀಟರ್ ಉದ್ದವಿದ್ದು, ಚಿಕ್ಕಗುಡ್ಡದ ಹತ್ತಿರ ಸುಮಾರು 300 ಮೀಟರ್ ಹಾಗೂ ನಾಲತವಾಡ ಸೀಮೆಯ ಭಾಗದಲ್ಲಿ ಸುಮಾರು 50 ಮೀಟರ್ ಕಾಮಗಾರಿ ಮಾತ್ರ ಬಾಕಿಯಿರುವುದರಿಂದ ಯೋಜನೆ ಅರ್ಧಕ್ಕೆ ನಿಂತಿದೆ ಎಂದು ಅವರು ತಿಳಿಸಿದರು.

ಭೂಸ್ವಾಧೀನಗೊಂಡ ರೈತರಿಗೆ ಸಮರ್ಪಕ ಪರಿಹಾರ ನೀಡದಿರುವ ಕಾರಣ ರೈತರು ಕಾಲುವೆ ಕಾಮಗಾರಿಗೆ ಅಡ್ಡಿಪಡಿಸುತ್ತಿದ್ದು, ಇದರಿಂದ ನೀರಾವರಿ ಯೋಜನೆ ಸ್ಥಗಿತಗೊಂಡಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಶೀಘ್ರದಲ್ಲಿ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಿ ರೈತರಿಗೆ ಪರಿಹಾರ ನೀಡಬೇಕು. ಜೊತೆಗೆ ಅರ್ಧಕ್ಕೆ ನಿಂತಿರುವ ಕಾಮಗಾರಿಯನ್ನು ಕೂಡಲೇ ಪ್ರಾರಂಭಿಸಿ ಪೂರ್ಣಗೊಳಿಸಬೇಕು ಎಂದು ಆಗ್ರಹಿಸಿದರು.

ಈ ಮನವಿಗೆ ಸ್ಪಂದನೆ ದೊರೆಯದೆ ಕಾಮಗಾರಿ ಮುಂದುವರಿಯದಿದ್ದಲ್ಲಿ ಯುವಜನ ಸೇನೆ ವತಿಯಿಂದ ನಾಗರಬೆಟ್ಟ ಗುಡ್ಡದ ಹತ್ತಿರ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಮನವಿ ಪತ್ರದಲ್ಲಿ ಕೆಬಿಜೆಎನ್-ಎಲ್ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು. ಈ ವೇಳೆ ಸಂಘಟನೆಯ ಪ್ರಮುಖರಾದ ಶೇಖರ್ ಗೌಡ ಉದಾನಗೌಡ್ರು, ಬಸನಗೌಡ ಎನ್. ಪಾಟೀಲ್, ಮಾಲಿಂಗರಾಯ ವನಹಳ್ಳಿ, ಶಿವಾನಂದ ಪೂಜಾರಿ, ಬಸನಗೌಡ ಎಂ. ಜಾದಲಗಿ, ರವಿ ಕೆ.ಹೆಚ್., ಸಿದ್ದು ಹಾದಿಮನಿ, ಸೋಮನಗೌಡ ಬೆಳ್ಳಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಮಹಮ್ಮದಿಯ ನೌ ಜವಾನ್ ಕಮಿಟಿಯ ವತಿಯಿಂದ ತಿಪ್ಪನಹಟ್ಟಿಯಲ್ಲಿ ಇಫ್ತಾರ್ ಸೌಹಾರ್ದ ಕೂಟ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಮಹಮ್ಮದಿಯ ನೌ ಜವಾನ್ ಕಮಿಟಿಯ ಆಶ್ರಯದಲ್ಲಿ ದಿ: 10-03-2026 ಮಂಗಳವಾರ ಸಾಯಂಕಾಲ 4:00 ಗಂಟೆಗೆ ತಿಪ್ಪನಹಟ್ಟಿ ಮಸೀದಿಯಲ್ಲಿ ಅತ್ಯಂತ ವಿಜೃಂಭಣೆಯಿಂದ ಸೌಹಾರ್ದ ಇಫ್ತಾರ್ ಕೂಟ ನಡೆಯಿತು.ಸಮಾಜದಲ್ಲಿ ಸೌಹಾರ್ದತೆ, ಸಹೋದರತ್ವ ಮತ್ತು ಧರ್ಮಸೌಹಾರ್ದತೆಯನ್ನು ಬೆಳೆಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.ಕಾರ್ಯಕ್ರಮಕ್ಕೆ ದಿವ್ಯ ಸಾನಿಧ್ಯವನ್ನು ಶ್ರೀ ಸೋಮನಾಥ ಶಿವಾಚಾರ್ಯ ಮಹಾಸ್ವಾಮಿಗಳು, ಖಾಸಾ ಶಾಖಾಮಠ, ಕರಿಬಸವ ನಗರ, ಸಿಂಧನೂರು ವಹಿಸಿ ಆಶೀರ್ವಚನ ನೀಡಿದರು.**

ತಮ್ಮ ಆಶೀರ್ವಚನದಲ್ಲಿ ಅವರು ಎಲ್ಲಾ ಧರ್ಮಗಳ ಸಾರ ಮಾನವೀಯತೆ ಮತ್ತು ಸಹೋದರತ್ವವಾಗಿದ್ದು, ಇಂತಹ ಇಫ್ತಾರ್ ಕೂಟಗಳು ವಿವಿಧ ಧರ್ಮಗಳ ನಡುವೆ ಸೌಹಾರ್ದತೆ ಹಾಗೂ ಪರಸ್ಪರ ಗೌರವವನ್ನು ಹೆಚ್ಚಿಸುತ್ತವೆ ಎಂದು ಹೇಳಿದರು.ಮುಖ್ಯ ಅತಿಥಿಗಳಾಗಿ ಆಗಮಿಸಿದ ಅಮರೇಗೌಡ ಮಲ್ಲಾಪುರ, ವನಸಿರಿ ಫೌಂಡೇಶನ್ ರಾಜ್ಯ ಪ್ರಶಸ್ತಿ ಪುರಸ್ಕೃತರು ಮಾತನಾಡಿ ರಮಝಾನ್ ತಿಂಗಳು ತ್ಯಾಗ, ನಿಯಮ ಮತ್ತು ದಾನಧರ್ಮದ ಸಂಕೇತವಾಗಿದ್ದು, ಇಂತಹ ಸೌಹಾರ್ದ ಕಾರ್ಯಕ್ರಮಗಳು ಸಮಾಜದಲ್ಲಿ ಶಾಂತಿ ಮತ್ತು ಐಕ್ಯತೆಯನ್ನು ಬಲಪಡಿಸುತ್ತವೆ ಎಂದು ಹೇಳಿದರು.ಸಾಮಾಜಿಕ ಚಿಂತಕರಾದ




ವೆಂಕೋಬ ನಾಯಕ್ ರಾಮತ್ನಾಳ ಅವರು ಮಾತನಾಡಿ ಇಫ್ತಾರ್ ಕೂಟಗಳು ಕೇವಲ ಉಪವಾಸ ಮುರಿಯುವ ಕಾರ್ಯಕ್ರಮವಲ್ಲ, ಅದು ಎಲ್ಲರನ್ನು ಒಂದೇ ವೇದಿಕೆಯಲ್ಲಿ ಸೇರಿಸಿ ಪರಸ್ಪರ ಪ್ರೀತಿ ಮತ್ತು ಸಹೋದರತ್ವವನ್ನು ಬೆಳೆಸುವ ಅವಕಾಶವಾಗಿದೆ ಎಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡ ಹಾರೂನ್ ಸಾಹೇಬ್ ಜಾಗೀರ್ದಾರ, ಜಮಾತೆ ಇಸ್ಲಾಮ್ ಹಿಂದ್ ಸಿಂಧನೂರು ಅಧ್ಯಕ್ಷ ಟಿ. ಹುಸೇನ್ ಸಾಬ್, ಜಾಫರ್ ಜಾಗೀರ್ದಾರ,ಜನಾಬ ಮಹಿಬೂಬ್ ಸಾಬ್ ಸಾಹುಕಾರ್ ಮುಳ್ಳೂರು, ಜನಾಬ ಮಾಬುಸಾಬ್ ಮಾಜಿ ಅಧ್ಯಕ್ಷರು ಎಸ್.ಡಿ. ಎಂ.ಸಿ. ತಿಪ್ಪನಹಟ್ಟಿ, ಜನಾಬ ಹುಸೇನ್ ಸಾಬ್ ಬೆಂಡೋನಿ ಮಾಜಿ ಅಧ್ಯಕ್ಷರು ಗ್ರಾಮ ಪಂಚಾಯತ್ ಪಗಡದಿನ್ನಿ, ಜನಾಬ ಹುಸೇನ್ ಪೀರ್‌ಸಾಬ್ ಮಾಜಿ ಉಪಾಧ್ಯಕ್ಷರು ಗ್ರಾಮ ಪಂಚಾಯತ್ ಪಗಡದಿನ್ನಿ, ಜನಾಬ ಮಹಿಬೂಸಾಬ್ ವಕೀಲರು ಕುನ್ನಟಗಿ, ಜನಾಬ ಖಾದರ್ ಭಾಷಾ ನ್ಯಾಯಬೆಲೆ ಅಂಗಡಿ ಕುನ್ನಟಗಿ ಕ್ಯಾಂಪ್ ಸೇರಿದಂತೆ ಹಲವಾರು ಗಣ್ಯರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸಕರಾಗಿ ಮೌಲಾನಾ ಫರೀದ್ ಉಮರಿ ಮಾನವಿ ಅವರು ರಂಜಾನ್ ತಿಂಗಳ ಮಹತ್ವದ ಬಗ್ಗೆ ಸವಿಸ್ತಾರವಾಗಿ ಮಾತನಾಡಿದರು.

ತಮ್ಮ ಭಾಷಣದಲ್ಲಿ ಅವರು ರಮಝಾನ್ ತಿಂಗಳು ಇಸ್ಲಾಂ ಧರ್ಮದಲ್ಲಿ ಅತ್ಯಂತ ಪವಿತ್ರ ತಿಂಗಳಾಗಿದ್ದು, ಈ ತಿಂಗಳಲ್ಲಿ ಮುಸ್ಲಿಮರು ಉಪವಾಸ ಆಚರಿಸುವ ಮೂಲಕ ಆತ್ಮಶುದ್ಧಿ, ನಿಯಮ ಮತ್ತು ತ್ಯಾಗವನ್ನು ಕಲಿಯುತ್ತಾರೆ. ಉಪವಾಸವು ಕೇವಲ ಆಹಾರ ಮತ್ತು ನೀರನ್ನು ತ್ಯಜಿಸುವುದಲ್ಲ, ಅದು ಮನಸ್ಸು, ಮಾತು ಮತ್ತು ನಡೆನುಡಿಗಳಲ್ಲೂ ಶುದ್ಧತೆ ತರಲು ಸಹಾಯಕವಾಗುತ್ತದೆ ಎಂದು ಹೇಳಿದರು. ಮುಂದುವರೆದು ಅವರು ರಮಝಾನ್ ತಿಂಗಳಲ್ಲಿ





ಕುರಾನ್ ಅವತರಿಸಿದ ಮಹತ್ವವನ್ನು ವಿವರಿಸಿ, ಈ ತಿಂಗಳಲ್ಲಿ ಪ್ರಾರ್ಥನೆ, ದಾನಧರ್ಮ, ಬಡವರಿಗೆ ಸಹಾಯ ಹಾಗೂ ಪರಸ್ಪರ ಸಹೋದರತ್ವವನ್ನು ಹೆಚ್ಚಿಸುವುದು ಅತ್ಯಂತ ಮಹತ್ವದ್ದಾಗಿದೆ.

ಇಫ್ತಾರ್ ಕೂಟಗಳು ಸಮಾಜದಲ್ಲಿ ಪ್ರೀತಿ, ಸಹಕಾರ ಮತ್ತು ಐಕ್ಯತೆಯನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದು ತಿಳಿಸಿದರು. ಅದೇ ರೀತಿ ಅವರು ಯುವಕರು ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಂಡು ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದತೆಯನ್ನು ಕಾಪಾಡುವಲ್ಲಿ ಮುಂದಾಗಬೇಕು ಎಂದು ಕರೆ ನೀಡಿದರು.ವಿಶೇಷ ಆಹ್ವಾನಿತರಾಗಿ ಜನಾಬ ಬಾಬರ್ ಪಾಷಾ ವಕೀಲರು, ಜನಾಬ ಜಿಲಾನಿ ಪಾಶ ಜಾಗೀರದಾರ, ಜನಾಬ ಜಾಫರ್ ಅಲಿ ಜಾಗೀರದಾರ, ಜನಾಬ ಖಾದರ್ ಸುಭಾನಿ, ಜನಾಬ ಎಂ.ಡಿ. ನದಿಮುಲ್ಲಾ, ಜನಾಬ ಹಾಜಿ ಮಸ್ತಾನ್ ಸಾಬ್ (ಬೆಲ್ಲೋ ಬ್ಯಾಟರಿ),



ಜನಾಬ ಹಾರೂನ್ ಪಾಷಾ ಜಾಗೀರದಾರ, ಜನಾಬ ಅಬೀದ್ ಜಾಗೀರದಾರ, ಜನಾಬ ಖಾಜಿ ಮಲ್ಲಿಕ್ ಅಹಮದ್ ವಕೀಲರು, ಜನಾಬ ಶಫಿವುಲ್ಲಾ ಖಾನ್ ಸಾಬ್, ಜನಾಬ ನಿಸಾರ್ ಖಾನ್ ಸಾಬ್, ಜನಾಬ ಖಾದರ್ ವಲಿ (ವಲಿ ಆರ್ಟ್ಸ್),

ಜನಾಬ ಖಾಜಾ ಹುಸೇನ್ ರೌಡಕುಂದ, ಜನಾಬ ಅಲ್ತಾಫ್ ಸಾಹುಕಾರ್ ಉಪ್ರಾಳ, ಜನಾಬ ಲಿಯಾಕತ್ ಅಹಮದ್, ಜನಾಬ ಸೈಯದ್ ಫಯಾಜ್ ಪೀರ್, ಜನಾಬ ಶಕ್ಷಾವಲಿ ವಕೀಲರು ಬೂತಲದಿನ್ನಿ, ಜನಾಬ ಮೊಹಮ್ಮದ್ ಮುಸ್ತಫಾ (ಮುಸ್ತಫಾ ಜ್ಯೂವೆಲ್ಲರ್ಸ್), ಜನಾಬ ಶಬ್ಬೀರ್ ನಾಯಕ್ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು. ಹಾಗು ಕಾರ್ಯಕ್ರಮದಲ್ಲಿ ಪರಿಸರ ಪ್ರೇಮಿಯಾದ ಅಮರೇಗೌಡ ಮಲ್ಲಾಪುರ ಅವರು ಹಾಗೂ ಗಣ್ಯರು ಸೇರಿ ಮಸೀದಿ ಆವರಣದಲ್ಲಿ ಗಿಡಗಳನ್ನು ನೆಡುವುದರ ಮೂಲಕ ಪರಿಸರ ಉಳಿಸಿ ನಮ್ಮ ಮುಂದಿನ ಪೀಳಿಗೆಗಾಗಿ ಎಂದು ಕರೆ ನೀಡಿದರು.ಈ ಸಂದರ್ಭದಲ್ಲಿ ಯುವಕರಾದ ಮಂಜೂರು ಹುಸೇನ್,ಮೆಹಬೂಬ್,ಬಾಷಾ, ಗೌಸ್, ಅವೇಜ್,ಇಮ್ರಾನ್, ಕೈಫ್,ಆಸಿಫ್, ಇನಾಯತ್ ಅವರ ನೇತೃತ್ವದಲ್ಲಿ ತಿಪ್ಪನಹಟ್ಟಿಯ ಯುವಕರು ಸೇರಿ ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಗೊಳಿಸಿದರು.